ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2020
ಬೆಲೆ ರೂ. 1



## ಮನಸೆಳೆದ ನೃತ್ಯರೂಪಕ
## ‘ಶ್ರೀ ರಾಮಾಯಣ ದರ್ಶನಂ’




ದೆಹಲಿ ಕರ್ನಾಟಕ ಸಂಘ ಮತ್ತು ಬೆಂಗಳೂರಿನ ಸಪ್ನ ಬುಕ್ ಹೌಸ್ ಆಶ್ರಯದಲ್ಲಿ ದಿನಾಂಕ 22.02.20ರಂದು ಇಂಡಿಯಾ ಹ್ಯಾಬಿಟೆಟ್ ಸೆಂಟರ್‌ನಲ್ಲಿ ಪ್ರೊ. ಕೆ.ಈ.ರಾಧಾಕೃಷ್ಣ ಅವರ ಅನುವಾದಿತ ಕೃತಿ 'ಯಾರು ಭಾರತ ಮಾತೆ' ಬಿಡುಗಡೆಗೊಂಡಿತು. ಈ ಅಪರೂಪದ ಕಾರ್ಯಕ್ರಮದಲ್ಲಿ ಭಾಗವಹಿಸಿ ಪುಸ್ತಕ ಬಿಡುಗಡೆಗೊಳಿಸಿದ ಮಾಜಿ ಪ್ರಧಾನ ಮಂತ್ರಿ ಡಾ.ಮನಮೋಹನ್ ಸಿಂಗ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ಅವರು ನೆನಪಿನ ಕಾಣಿಕೆ ನೀಡಿ ಗೌರವಿಸಿದರು.



ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ದಿನಾಂಕ 29.02.20ರಂದು ನಡೆದ ಶಿಕ್ಷಣ ಮತ್ತು ಉದ್ಯೋಗ : ರಾಷ್ಟ್ರೀಯ ನೀತಿ ವಿಚಾರ ಸಂಕಿರಣದಲ್ಲಿ ದಕ್ಷಿಣ ಭಾರತದ ಖ್ಯಾತ ನಟ ಕನ್ನಡಿಗ ಸುಮನ್ ಭಾಗವಹಿಸಿದರು. ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 । ಸಂಚಿಕೆ 6
ಮಾರ್ಚ್ 2020



ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜಿ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


ಮುಖಪುಟ ಚಿತ್ರ
ದಿನಾಂಕ 29.02.20ರಂದು ಸಂಘದಲ್ಲಿ ಪ್ರದರ್ಶನಗೊಂಡ ಶ್ರೀರಾಮಯಣ ದರ್ಶನಂ ನೃತ್ಯ ರೂಪಕದ ದೃಶ್ಯ

# ಸಂಪಾದಕೀಯ

## ನೆಹರೂ ವಿಚಾರಗಳ ಮರುಚಿಂತನೆ

ದೇಶಭಕ್ತಿ, ಪೌರತ್ವ ತಿದ್ದುಪಡಿ ಕಾಯ್ದೆ ಇತ್ಯಾದಿ ಇಂದು ಭಾರತದಲ್ಲಿ ಬಹುಚರ್ಚಿತ ವಿಷಯಗಳಾಗಿ ಪರಿಣಮಿಸಿದೆ. ಪೌರತ್ವ ತಿದ್ದುಪಡಿ ಕಾಯ್ದೆಗೆ ವ್ಯಕ್ತವಾದ ಪ್ರತಿರೋಧ ಮತ್ತು ನಾಗರಿಕ ದಂಗೆಯಿಂದ ಜನಜೀವನ ಅಸ್ತವ್ಯಸ್ಥವಾಗಿದೆ. ದೆಹಲಿಯಲ್ಲಿ ಐವತ್ತಕ್ಕೂ ಹೆಚ್ಚು ಜನರು ಬಲಿಯಾಗಿದ್ದು ದುರಂತ.

ಈ ಎಲ್ಲ ಆತಂಕಗಳ ನಡುವೆ ದೇಶದ ಮೊದಲ ಪ್ರಧಾನ ಮಂತ್ರಿ ಪಂಡಿತ್ ಜವಹರಲಾಲ್ ನೆಹರೂ ಅವರ ಚಿಂತನೆಗಳ ಇಂಗ್ಲಿಷ್ ಕೃತಿಯೊಂದು ಎಲ್ಲರ ಗಮನ ಸೆಳೆದಿದೆ. 'ಹೂ ಈಸ್ ಭಾರತ ಮಾತಾ?' ಎಂಬ ಆ ಸಂಪಾದಿತ ಕೃತಿಯನ್ನು ಪ್ರಕಟಿಸಿದವರು ಲೇಖಕ ಮತ್ತು ಪ್ರಾಧ್ಯಾಪಕ ಪ್ರೊ.ಪುರುಷೋತ್ತಮ ಅಗರ್‌ವಾಲ್.

ಈ ಕೃತಿ ಇದೀಗ ಕನ್ನಡದಲ್ಲೂ ಲಭ್ಯವಿದೆ. ಬಹುಮುಖ ಸಾಧನೆಗಳ ಕವಿ, ಶಿಕ್ಷಣ ತಜ್ಞ ಪ್ರೊ. ಕೆ.ಈ.ರಾಧಾಕೃಷ್ಣ ಅವರು ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈಚೆಗೆ ಇದನ್ನು ದೆಹಲಿಯ ಇಂಡಿಯಾ ಹ್ಯಾಬಿಟೆಟ್ ಸೆಂಟರ್‌ನಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಬಿಡುಗಡೆಗೊಳಿಸಿದರು. ಬಿಡುಗಡೆ ಸಮಾರಂಭಕ್ಕೆ ಸಹಯೋಗ ನೀಡಿದ್ದು ದೆಹಲಿ ಕರ್ನಾಟಕ ಸಂಘ ಎನ್ನುವುದು ವಿಶೇಷ ಮತ್ತು ಇದು ಸಂಘದ ಚಟುವಟಿಕೆಯಲ್ಲಿ ಸ್ಮರಣಾರ್ಹ.

'ಯಾರು ಭಾರತ ಮಾತಾ?' ಕೃತಿಯು ನೆಹರೂ ವಿಚಾರಗಳ ಕುರಿತ ಮರುಚಿಂತನೆಗೆ ಅವಕಾಶ ಕಲ್ಪಿಸಿದೆ. ನೆಹರೂ ವಿಚಾರಧಾರೆ ಹಿಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ ಎಂದು ಡಾ.ಮನಮೋಹನ್ ಸಿಂಗ್ ಅವರು ಹೇಳಿದ್ದು ಗಮನಾರ್ಹ. ದೇಶದಲ್ಲಿ ಇಂದು ಕೋಮು ಸಾಮರಸ್ಯ ನಿಧಾನವಾಗಿ ಹದಗೆಡುತ್ತಿದೆ. ಈ ಸನ್ನಿವೇಶದಲ್ಲಿ ದೇಶದ ಏಕತೆ ಮತ್ತು ಸಹಿಷ್ಣುತೆ ಕುರಿತು ಹೆಮ್ಮೆಯಿಂದ ಬರೆದಿರುವ ಮತ್ತು ಇಲ್ಲಿನ ವಿವಿಧತೆಯನ್ನು ಮನಗಂಡಿದ್ದ ನೆಹರೂ ಅವರು ಕಂಡ ಭಾರತವನ್ನು ಸಂರಕ್ಷಿಸುವ ಹೊಣೆಗಾರಿಕೆ ಎಲ್ಲ ಭಾರತೀಯರ ಮೇಲಿದೆ.

ಭಾರತದ ಇತಿಹಾಸ ಮತ್ತು ಪರಂಪರೆಯ ಬಗೆಗೆ ಆಳವಾಗಿ ತಿಳಿದುಕೊಂಡಿದ್ದ ನೆಹರೂ ಅವರು ದೇಶದ ಉದ್ದಗಲಕ್ಕೂ ಸಂಚರಿಸಿ ಜನರ ನಾಡಿ ಮಿಡಿತವನ್ನು ಅರಿಯುವ ಆಸಕ್ತಿ ಹೊಂದಿದ್ದರು. ಈ ಬಗೆಯ ಕುತೂಹಲ ಮತ್ತು ಅಧ್ಯಯನಶೀಲತೆಯಿಂದ ಅವರ 'ಡಿಸ್ಕವರಿ ಆಫ್ ಇಂಡಿಯಾ' ಕೃತಿ ರಚನೆಗೊಂಡಿತು. ನೆಹರೂ ಅವರ ಕೆಲವು ಅಪರೂಪದ ಬರಹಗಳನ್ನು ಮತ್ತು ಪತ್ರಗಳನ್ನು 'ಯಾರು ಭಾರತ ಮಾತಾ?' ಕೃತಿಯಲ್ಲಿ ಕಾಣಬಹುದು. ಅಲ್ಲದೇ ಮಹಾತ್ಮ ಗಾಂಧಿಯಿಂದ ತೊಡಗಿ ಅಟಲ್‌ಬಿಹಾರಿ ವಾಜಪೇಯಿ ಅವರು ನೆಹರೂ ಅವರನ್ನು ಕಂಡ ಬಗೆಯನ್ನು ಈ ಕೃತಿಯ ಮೂಲಕ ತಿಳಿದುಕೊಳ್ಳಬಹುದು.

ಕೃತಿಯ ಕೊನೆಯಲ್ಲಿ ವಾಜಪೇಯಿ ಅವರು ನೆಹರೂ ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿಯ ಬರಹ ರೂಪವಿದೆ. ಅದರ ಆರಂಭದ ಸಾಲುಗಳು ಹೃದಯಸ್ಪರ್ಶಿಯಾಗಿದೆ.

"ಮಾನ್ಯರೆ, ಇಂದು ನನ್ನ ಕನಸು ಭಗ್ನವಾಗಿದೆ. ಒಂದು ಗೀತೆ ಮೌನವಾಗಿದೆ. ಒಂದು ಜ್ಯೋತಿ ಅನಂತದ ಜತೆ ಲೀನವಾಗಿದೆ. ಭಯ ಮತ್ತು ಹಸಿವುಗಳಿಲ್ಲದ, ಜಗತ್ತಿನ ಕನಸು ಅದು. ಭಗವದ್ಗೀತೆಯನ್ನು ಪ್ರತಿನಿಧಿಸುತ್ತಿದ್ದ ಪೌರಾಣಿಕ ಗೀತೆ ಅದು. ಮತ್ತು ಗುಲಾಬಿ ಹೂವಿನ ಕಂಪು ಮತ್ತು ಮಾಧುರ್ಯ ಅದು. ರಾತ್ರಿಯಿಡೀ ಉರಿದು, ಎಲ್ಲಾ ಕತ್ತಲೆಗಳ ವಿರುದ್ಧ ಹೋರಾಡಿ ನಮಗೆ ದಾರಿ ತೋರಿ, ಒಂದು ಮುಂಜಾನೆ ನಿರ್ವಾಣ ಹೊಂದಿದ ಜ್ಯೋತಿ ಅದು"... ಹೀಗೆಂದು ಅಂದು ರಾಜ್ಯಸಭಾ ಸದಸ್ಯರಾಗಿದ್ದ ಕವಿ ಹೃದಯದ ಅಟಲ್ ಬಿಹಾರಿ ವಾಜಪೇಯಿ ಅವರು ನೆಹರೂ ನಿಧನರಾದ ಮೇಲೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ವಾಜಪೇಯಿ ಅವರು ಹೇಳಿದ ಆ ಜ್ಯೋತಿಯನ್ನು ಈಗ ಮತ್ತೆ ಬೆಳಗಬೇಕಾಗಿ ಬಂದಿದೆ. ಅದು ಇಂದಿನ ತುರ್ತು ಅಗತ್ಯವಾಗಿದೆ.

ಬೆಂಗಳೂರಿನ ಪ್ರತಿಷ್ಠಿತ ಸಪ್ನ ಬುಕ್ ಹೌಸ್ ಪ್ರಕಟಿಸಿದ ನೆಹರೂ ಚಿಂತನೆಗಳ ಈ ಕೃತಿಯನ್ನು ನಾವು ಆಸಕ್ತಿಯಿಂದ ಓದಬಹುದು. ಕನ್ನಡದಲ್ಲಿ ಬಂದ ಹಾಗೆ ಇತರ ಭಾಷೆಯಲ್ಲೂ ಈ ಕೃತಿಯನ್ನು ಹೊರತರುವ ಇರಾದೆ ದೇಶದ ಒಂದು ಪ್ರಮುಖ ರಾಷ್ಟ್ರೀಯ ಪಕ್ಷಕ್ಕೆ ಇದೆ ಎನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ. ಈ ಬಗೆಯ ಓದಿನ ಮೂಲಕ ಭಾರತದ ನೈಜ ಶಕ್ತಿಯನ್ನು ಅರಿಯಲು ಮತ್ತು ಅದನ್ನು ಇನ್ನಷ್ಟು ಬಲಿಷ್ಠಗೊಳಿಸಲು ಸಾಧ್ಯವಾದರೆ ಇಂತಹ ಹೆಜ್ಜೆಗಳು ಸ್ವಾಗತಾರ್ಹ.

*ಡಾ. ಅವನೀಂದ್ರನಾಥ್ ರಾವ್*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 6
ಮಾರ್ಚ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ದೆಹಲಿಯ ಅಂತರಾಳದಲ್ಲಿ ತಳಮಳ

ದೆಹಲಿಯ ಈಶಾನ್ಯ ಭಾಗದಲ್ಲಿ ಜನಜೀವನ ಕಳೆದ ಹತ್ತಾರು ದಿನಗಳಿಂದ ಅಸ್ತವ್ಯಸ್ತಗೊಂಡಿದೆ. ಅಲ್ಲಿ ವ್ಯವಸ್ಥಿತವಾಗಿ ನಡೆದಿದೆಯೆನ್ನಲ್ಲಾದ ಕೋಮು ಗಲಭೆಯಲ್ಲಿ ಈಗ ಐವತ್ತಕ್ಕೂ ಹೆಚ್ಚು ಸಾಮಾನ್ಯ ಜನರು ಸಾವನ್ನಪ್ಪಿದ್ದು ಈ ಘಟನಾವಳಿಗಳು ನಿಧಾನವಾಗಿ ದೆಹಲಿಯ ಇನ್ನೊಂದು ಕರಾಳ ಇತಿಹಾಸದ ಭಾಗವಾಗುತ್ತಿದೆ. ಈ ಬಗೆಯ ಹಿಂಸೆಯ ಅಬ್ಬರ ದೆಹಲಿಗೆ ಹೊಸದೇನಲ್ಲ. ತನ್ನ ಸಾವಿರಾರು ವರುಷಗಳ ಇತಿಹಾಸದಲ್ಲಿ ಈ ಬಗೆಯ ದಾರುಣ ಕಥಾನಕಗಳನ್ನು ದೆಹಲಿ ತನ್ನ ಅಂತರಾಳದಲ್ಲಿ ಅಡಗಿಸಿಕೊಂಡಿದೆ.

ಈ ಎಲ್ಲ ಘಟನೆಗಳು ನಡೆದ ಈಶಾನ್ಯ ದೆಹಲಿಯಲ್ಲಿರುವ ಶಾಹಾದ್ರ ಜಿಲ್ಲೆ ಜನನಿಬಿಡವಾದ ಪ್ರದೇಶ. ದೆಹಲಿಯ ಮುಖ್ಯಧಾರೆಯಿಂದ ಈ ಭಾಗದಲ್ಲಿ ಸುಮಾರು ಹದಿನೈದು ಮೈಲು ದೂರದಲ್ಲಿರುವ ಶಾಹದ್ರಾ ಈಗ ದೆಹಲಿಯ ಉದರದೊಳಕ್ಕೆ ಸೇರಿ ಹೋಗಿದೆ. ಈ ಶಾಹದ್ರಾದಿಂದ ಅನತಿ ದೂರದಲ್ಲಿರುವ ಅಲ್ಲಿನ ಆಸುಪಾಸಿನ ಬಡಾವಣೆಗಳಾದ ಮೌಜಪುರ, ಜಫರಾಭಾದ, ಶಿವವಿಹಾರ, ಮುಸ್ತಫಾಬಾದ, ಚಾಂದಭಾಗ, ಬ್ರಿಜಪುರಿ, ಬಾಬರಪುರ, ಕರವಾಲ ನಗರ ಮತ್ತು ಯಮುನಾ ವಿಹಾರಗಳಲ್ಲಿ ನಡೆದ ಈ ಗಲಭೆಗಳಲ್ಲಿ ಸಿಲುಕಿ ಹಾಕಿಕೊಂಡು, ತಮ್ಮ ಜೀವವನ್ನು ಕಳೆದುಕೊಂಡವರು ಮತ್ತು ನೂರಾರು ಗಾಯಗೊಂಡವರೆಲ್ಲ ಸಮಾಜದ ಅತ್ಯಂತ ಸಾಮಾನ್ಯ ವರ್ಗದಿಂದ ಬಂದವರು. ದಿನನಿತ್ಯದ ಬದುಕನ್ನು ಹಸನಾಗಿ ಕಳೆಯುವ ಅವರ ಕನಸುಗಳು ಈಗ ನುಚ್ಚುನೂರಾಗಿದೆ. ಬದುಕನ್ನು ಮತ್ತೊಮ್ಮೆ ಕಟ್ಟಿಕೊಳ್ಳುವ ಅವರ ಪ್ರಯತ್ನ ಸುಲಭವಾದದ್ದಲ್ಲ.

ಈ ಎಲ್ಲ ಬಡಾವಣೆಗಳಿಂದ ಅನತಿ ದೂರದಲ್ಲಿ ಸಾವಿರಾರು ವರುಷಗಳಿಂದ ಹರಿದು ಬರುತ್ತಿರುವ ಯಮುನೆ ಒಂದು ಬಗೆಯಲ್ಲಿ ದೆಹಲಿಯ ಈ ಎಲ್ಲ ತಳಮಳಗಳನ್ನು ತನ್ನ ಉದರದಲ್ಲಿ ಇರಿಸಿಕೊಂಡು ಬಂದಂತಿದೆ. ಶಾಹದ್ರಾ ಉಪನಗರ ಈಗ ದೆಹಲಿಯ ಒಂದು ಪ್ರಮುಖ ಜಿಲ್ಲಾ ಕೇಂದ್ರವಾಗಿದೆ. ಉತ್ತರ ಪ್ರದೇಶದ ಮೀರತ್ ಕಡೆಯಿಂದ ಬರುವವರಿಗೆ ಈ ಶಾಹದ್ರಾ ಮೊಗಲರ ಕಾಲದಿಂದಲೂ ಇದ್ದ ಒಂದು ಹೆಬ್ಬಾಗಿಲು. ದೆಹಲಿಯ ಅತ್ಯಂತ ಹಳೆಯ ವಾಣಿಜ್ಯ ಕೇಂದ್ರವಾದ ಚಾಂದನಿ ಚೌಕಕ್ಕೆ ಪೂರಕವಾಗಿ ಬೆಳೆದು ಬಂದ ಶಾಹದ್ರಾ ಮತ್ತು ಇತರ ಅಲ್ಲಿನ ಬಡಾವಣೆಗಳಲ್ಲಿ ಎಲ್ಲ ಕೋಮಿನ ಜನರು ಹಾಸುಹೊಕ್ಕಾಗಿ ಬದುಕಿಕೊಂಡು ಬಂದದ್ದು ತೀರಾ ವಿಶಿಷ್ಟವಾದ ವಿಚಾರವೇನೂ ಆಗಿರಲಿಲ್ಲ.  ಅದು ಒಂದು ಬಗೆಯಲ್ಲಿ ಇತಿಹಾಸದ ಭಾಗವಾಗಿ ಹೋಗಿದೆ. ಭಾರತ-ಪಾಕಿಸ್ತಾನ ವಿಭಜನೆಯ ಕಾಲದಲ್ಲಿ ಸಾವಿರಾರು ನಿರಾಶ್ರಿತರು ಮತ್ತು ವಲಸೆಗಾರರು ಬಂದು ಈ ಭಾಗದಲ್ಲಿ ನೆಲೆಸಿದರು. ಅವರೆಲ್ಲರೂ ಹಲವಾರು ಬಗೆಗಳಲ್ಲಿ ತಮ್ಮ ಬದುಕನ್ನು ಇಲ್ಲಿಯೆ ಕಟ್ಟಿಕೊಂಡವರು. ಇನ್ನೂ ಮುಖ್ಯವಾಗಿ ದೆಹಲಿಯ ಕೇಂದ್ರ ಮತ್ತು ರಾಜ್ಯ ಸರಕಾರಗಳ ಚುನಾವಣೆಯಲ್ಲಿ ಈ ಪೂರ್ವ ಭಾಗದಿಂದ ಚುನಾಯಿತರಾಗಿ ಹೋಗುವವರ ಸಂಖ್ಯೆಯೂ ಸಾಕಷ್ಟು. ಹೀಗಾಗಿ ಅಲ್ಲಿನ ಜನರ ಬೆಂಬಲ ರಾಜಕೀಯ ಪಕ್ಷಗಳಿಗೆ ಮುಖ್ಯವಾಗತೊಡಗಿತು. ಸರಕಾರದ ಎಲ್ಲ ಯೋಜನೆಗಳ ಲಾಭ ಪಡೆಯಲು ಇಲ್ಲಿನ ಬಡಾವಣೆಯವರಿಗೆ ಸಾಧ್ಯವಾದರೂ, ಹೊಸದಾಗಿ ತಲೆ ಎತ್ತಿದ ಕೆಲ ಬಡಾವಣೆಗಳಿಗೆ ಸೌಕರ್ಯದ ಕೊರತೆಯಿತ್ತು.

ಆದರೆ, ದೆಹಲಿ ಬೆಳೆದ ಹಾಗೆ ಈ ಎಲ್ಲ ಪೂರ್ವದ ಬಡಾವಣೆಗಳು ಸರಕಾರ ಕೊಡಮಾಡಿದ ಎಲ್ಲ ಮೂಲಸೌಕರ್ಯಗಳ ಮೂಲಕ ವಿಸ್ತಾರಗೊಂಡವು. ದೆಹಲಿಯ ಮೆಟ್ರೊ ರೈಲು ಸಹ ಅಲ್ಲಿನ ಶಿವ ವಿಹಾರದ ತನಕ ಸಾಗುತ್ತದೆ. ರಸ್ತೆಗಳು, ಮೇಲು ಸೇತುವೆಗಳು, ನೀರಿನ ಸರಬರಾಜು ವ್ಯವಸ್ಥೆ... ಹೀಗೆ ಈ ಎಲ್ಲ ಸವಲತ್ತುಗಳು ಅಲ್ಲಿನ ಕೆಲ ಭಾಗಗಳಿಗೆ ದೊರೆತರೂ, ಇನ್ನುಳಿದ ಹಲವಾರು ಭಾಗಗಳು ಈ ಬಗೆಯ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ. ಎಲ್ಲ ಕೋಮಿನವರು, ಅವರವರ ದೇಗುಲಗಳನ್ನು, ಗುರುದ್ವಾರಗಳನ್ನು, ಮಸೀದಿಗಳನ್ನು, ಇಗರ್ಜಿಗಳನ್ನು ಕಟ್ಟಿಕೊಂಡದ್ದಲ್ಲದೆ, ಅವರೆಲ್ಲರ ಮನೆಗಳು, ಬಡಾವಣೆಗಳು ಸೌಹರ್ದತೆಯ ಪ್ರತೀಕವೆಂಬಂತೆ ಹಾಸುಹೊಕ್ಕಾಗಿ ಬೆಳೆದು ಬಂದ್ದದ್ದು, ಈ ಭಾಗದ ವಿಶಿಷ್ಟ ಇತಿಹಾಸವಾಗಿದೆ.

ಆದರೆ, ಇವೆಲ್ಲದಕ್ಕೂ ಈಗ ಧಕ್ಕೆ ಒದಗಿ ಬಂದಂತಿದೆ. ಜಾಫರಾಬಾದ ಮೆಟ್ರೊ ನಿಲ್ದಾಣದಡಿಯಲ್ಲಿ ಶಹಿನಭಾಗ ಮಾದರಿಯಲ್ಲಿ ಮಹಿಳೆಯರ ಪೌರತ್ವ ಕಾನೂನಿನ ವಿರುದ್ಧದ ಶಾಂತಿಯುತ ಪ್ರತಿಭಟನೆ ಪ್ರಾರಂಭವಾದದ್ದು ಹಲವಾರು ಮುಂದಿನ ಘಟನಾವಳಿಗಳಿಗೆ ಕಾರಣವಾದಂತಿದೆ. ಶಾಂತಿಯುತವಾದ ಪ್ರತಿಭಟನೆ ಎಲ್ಲ ನಾಗರಿಕರ ಹಕ್ಕು ಎಂದು ನಮ್ಮ ಸರ್ವೋಚ್ಚ ನ್ಯಾಯಾಲಯ ಸಾರಿ ಸಾರಿ ಹೇಳಿದ್ದರೂ, ಅದನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವದರ ಬಗ್ಗೆ ಎಲ್ಲ ಕೋಮಿನವರಿಗೆ ಯಾವ ಮುಜಗರವೂ ಇದ್ದಂತಿರಲಿಲ್ಲ.  ದೆಹಲಿಯ ರಾಜ್ಯ ಸರಕಾರದ ಚುನಾವಣೆಯ ಕಾಲದಲ್ಲಿ ಮತ್ತು ನಂತರದಲ್ಲಿ ಬಿತ್ತರಿಸಲ್ಪಟ್ಟ ಹಲವಾರು ರಾಜಕೀಯ ಕೂಗಾಟಗಳು ಜನಮನವನ್ನು ಕಲಕಿದ್ದರ ಕುರಿತಾಗಿ ಚರ್ಚೆ ಇನ್ನೂ ಮುಗಿಯುವ ಹಂತದಲ್ಲಿಲ್ಲ. ಈ ಹಿಂಸೆಯ ನರ್ತನ ದೆಹಲಿಯ ಈ ಎಲ್ಲ ಅಮಾಯಕರ ಬದುಕನ್ನು ಅಲ್ಲೋಲಕಲ್ಲೋಲಗೊಳಿಸಿದೆ. ಹಿಂಸೆಯೆಂಬುದು ದೆಹಲಿಗೆ ಹೊಸತೇನಲ್ಲ. ಸಾವಿರಾರು ವರುಷಗಳ ಹಿಂಸೆಯ ಚರಿತ್ರೆಯನ್ನು ತನ್ನ ಉದರಲ್ಲಿರಿಸಿಕೊಂಡು ಅದನ್ನು ಅರಗಿಸಿಕೊಳ್ಳುವ ಪ್ರಯತ್ನ ಈ ದೆಹಲಿಯದು.

ದೆಹಲಿಯ ಪೂರ್ವ ಭಾಗದಲ್ಲಿ ವಾಸಿಸುತ್ತಿರುವ ಕನ್ನಡಿಗರ ಕುರಿತಾಗಿ ಇಲ್ಲಿಯ ತನಕ ನಮಗಂತೂ ಯಾವ ಮಾಹಿತಿಯೂ ಬಂದಿಲ್ಲ. ಬೆರಳೆಣಿಗೆಯಷ್ಟಾದರೂ ಕನ್ನಡಿಗರು ಇಲ್ಲಿ ತಮ್ಮ ಬದುಕಿನ ಆಶಯಗಳಿಗಾಗಿ ಇಲ್ಲಿ ವಾಸಿಸುತ್ತಿರಲೇಬೇಕೆಂದು ನಮ್ಮ ಊಹೆ. ಮುಂದಿನ ದಿನಗಳಲ್ಲಿ ನಿಧಾನವಾಗಿ ಈ ವಿವರಗಳು ಪೊರೆಪೊರೆಯಾಗಿ ನಮಗೆ ಗೋಚರಿಸಬಹುದು. ಅವರ ಸಂಕಷ್ಟಗಳಲ್ಲಿ ಭಾಗಿಯಾಗುವುದು ನಮ್ಮ ಆದ್ಯ ಕರ್ತವ್ಯವೆಂದು ತೋರುತ್ತದೆ.

ಈ ಸಂದರ್ಭದಲ್ಲಿ ನಮ್ಮ ದೇಶದ ಅತ್ಯಂತ ಹಿರಿಯ ಐ.ಎ.ಎಸ್ ಅಧಿಕಾರಿಗಳಾಗಿದ್ದ (ಮತ್ತು ದೆಹಲಿ ಕನ್ನಡ ಶಾಲೆಗೆ ಎರಡು ಭಾರಿ ಅಧ್ಯಕ್ಷರಾಗಿ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ) ದಿವಂಗತ ಶ್ರೀ ಎನ್ ಜೆ ಕಾಮತರ ನೆನಪು ಮತ್ತು ಮಾತುಗಳು ನನ್ನ ಮನದಾಳದಿಂದ ಮೂಡಿ ಬರುತ್ತಿವೆ. ಅವರು 1947 ರ ಮತ್ತು 1948 ರ ನಮ್ಮ ದೇಶದ ಅತ್ಯಂತ ಕಷ್ಟಕರ ಕಾಲದಲ್ಲಿ ದೆಹಲಿಯ ಸಿವಿಲ್ ಲೈನ್ಸ್, ಶಾಹದ್ರಾ ಮತ್ತು ಹಳೆ ದೆಹಲಿಯ ರೈಲ್ವೆ ನಿಲ್ದಾಣಗಳಲ್ಲಿ ಪಾಕಿಸ್ತಾನದಿಂದ ಬರುವ ನಿರಾಶ್ರಿತರನ್ನು ಬರಮಾಡಿಕೊಂಡು, ಅವರನ್ನು ನೊಂದಾಯಿಸುವ ಕೆಲಸಕ್ಕೆ ಅವರನ್ನು ಆಗಿನ ಸರಕಾರ ನಿಯುಕ್ತಿಗೊಳಿಸಿತ್ತು. ಆ ಕೆಲಸಕ್ಕಾಗಿ ಅವರು ಎಷ್ಟೋ ದಿನಗಳ ಕಾಲ ಈ ರೈಲ್ವೇ ನಿಲ್ದಾಣಗಳಲ್ಲಿ ಇರುತ್ತಿದ್ದರು. ರೈಲುಗಳು ನಿರಾಶ್ರಿತರನ್ನು ತುಂಬಿಕೊಂಡು ಬರುತ್ತಿದ್ದವಂತೆ. ಆದರೆ ಹೆಸರನ್ನು ನೊಂದಾಯಿಸಲು ಅವರಿಗೆ ಸಾಧ್ಯವಾಗಲೇ ಇಲ್ಲ. ಕಾರಣವೆಂದರೆ, ಈ ಎಲ್ಲ ರೈಲಿನ ಬೋಗಿಗಳು ನಿರಾಶ್ರಿತರ ಸತ್ತ ದೇಹಗಳನ್ನು ಮಾತ್ರ ತರುತ್ತಿದ್ದವಂತೆ. ಅತ್ತ ಪಾಕಿಸ್ತಾನದತ್ತ ಹೋದ ರೈಲಿನಲ್ಲೂ ಇದೆ ಸತ್ತ ದೇಹಗಳು. ಅವರ ಈ ಮಾತುಗಳನ್ನು ಕೇಳಿದಾಗ, ನೆನೆಪಿಸಿಕೊಂಡಾಗ, ನನ್ನ ಅಂತರಾಳದಲ್ಲಿ ಏನೋ ಒಂದು ಕಸಿವಿಸಿ. ನಮ್ಮ ದಕ್ಷಿಣ ಏಶಿಯಾದ ಅತ್ಯಂತ ದೊಡ್ಡ ದುರಂತ ಇದು. ಇದನ್ನೆಲ್ಲ ಮೀರಿ ನಾವೆಲ್ಲ ಎಂದು ಎದ್ದು ನಿಲ್ಲುವೆವೊ ಎಂಬ ಕನಸು ಮತ್ತು ಹಂಬಲ ದಿವಂಗತ ಶ್ರೀ ಕಾಮತರದ್ದು. ಈ ಎಲ್ಲ ದುರಂತಗಳನ್ನು ಕಣ್ಣಾರೆ ಕಂಡರೂ ಈ ದೇಶದ ಭವಿತವ್ಯದಲ್ಲಿ, ಅದರ ಹೊಸ ಆಶಯಗಳಲ್ಲಿ ಪೂರಾ ನಂಬಿಕೆಯನ್ನಿಟ್ಟಂತಹ ದಿವಂಗತ ಶ್ರೀ ಕಾಮತರಂತಹ ವಿವೇಚನೆಯ ಹೊಂಗಿರಣ ನಮ್ಮನ್ನೆಲ್ಲ ಆವರಿಸಲಿ ಎಂದು ಹಾರೈಸುತ್ತೇನೆ.  ಕೊನೆಯಲ್ಲಿ...ದಿ. ಕಾಮತರ ಈ ಎಲ್ಲ ವಿವರಗಳನ್ನು ಕೆಲ ವರ್ಷಗಳ ಹಿಂದೆ ನಮ್ಮ ಈ ಅಭಿಮತದಲ್ಲಿ ಅವರದ್ದೇ ವಿಶೇಷ ಸಂಚಿಕೆಯಲ್ಲಿ ವಿವರವಾಗಿ ಪ್ರಕಟಿಸಿದ್ದನ್ನು ನಾನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಬಂಧುಗಳೇ, ಎಲ್ಲ ಮಕ್ಕಳಿಗೂ ಪರೀಕ್ಷೆಗಳು ಮುಗಿಯುತ್ತಾ ಬರುತ್ತಿದೆ.. ಎಲ್ಲ ಮಕ್ಕಳ ಫಲಿತಾಂಶ ಒಳ್ಳೆಯದು ಬರಲಿ ಎಂದು ಹಾರೈಸುತ್ತೇನೆ. ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಆಟೋಟ ಸ್ಪರ್ಧೆಗಳು ಏಪ್ರಿಲ್ 4 ಮತ್ತು 5ರಂದು ನಡೆಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಇದರಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ. ಕರ್ನಾಟಕ ಸಂಘದ ವಾರ್ಷಿಕೋತ್ಸವ ಅಂಗವಾಗಿ ನಮ್ಮ ಕನ್ನಡದ ಜಾನಪದ ಶೈಲಿಯ ಸಮೂಹ ನೃತ್ಯಗಳನ್ನು ಆಯೋಜಿಸಲು ಈಗಾಗಲೇ ಸಂದೇಶವನ್ನು ತಮಗೆ ಕಳುಹಿಸಲಾಗಿದೆ. ತಂಡದ ಹೆಸರುಗಳನ್ನು ಸಂಘದ ಕಚೇರಿಗೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.. ಇದೇ ಮಾರ್ಚ್ 22ರಂದು ಹೆಸರಾಂತ ನಿರ್ದೇಶಕರು, ರಾಷ್ಟ್ರ ಪ್ರಶಸ್ತಿ ವಿಜೇತರಾದ ಮತ್ತು ಕನ್ನಡ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್.ನಾಗಾಭರಣ ಅವರ 'ಬೆನಕ' ತಂಡದಿಂದ ನಾಟಕಗಳು ಪ್ರದರ್ಶನಗೊಳ್ಳಲಿದೆ. ದಯವಿಟ್ಟು ಬಂದು ನಾಟಕವನ್ನು ಆನಂದಿಸಿ. ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ವಾರ್ಷಿಕ ಮಹಾಸಭೆಯನ್ನು ಏಪ್ರಿಲ್ ತಿಂಗಳಲ್ಲಿ ಮಾಡಲಾಗುತ್ತಿದೆ, ದಯವಿಟ್ಟು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗ ದೆಹಲಿ ಕರ್ನಾಟಕ ಸಂಘಕ್ಕೆ ಮಾರ್ಚ್ 5ರಂದು ಭೇಟಿ ನೀಡಿತ್ತು. ನಿಯೋಗಕ್ಕೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಮತ್ತು ಹೊರನಾಡು ಸಂಘ ಸಂಸ್ಥೆಗಳಿಗೆ ಆಗಬೇಕಾದ ಅಗತ್ಯತೆಗಳನ್ನು ಅವರ ಗಮನಕ್ಕೆ ತರಲಾಯಿತು. ದೆಹಲಿಯ ಕರ್ನಾಟಕ ಭವನದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕನ್ನಡಿಗರನ್ನೇ ತೆಗೆದುಕೊಳ್ಳುವುದು, ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ಕನ್ನಡಿಗರನ್ನು ಕಾಯಂಗೊಳಿಸವುದು, ಕರ್ನಾಟಕ ಭವನದಲ್ಲಿ ಉದ್ಯೋಗಾವಕಾಶ ಕೇವಲ ಕನ್ನಡದವರಿಗೆ ಮಾತ್ರ ಕಲ್ಪಿಸಿಕೊಡುವುದು, ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಹೊರನಾಡ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡಲು ಕನ್ನಡ ಸಂಸ್ಕೃತಿ ಇಲಾಖೆಗೆ ಪತ್ರಗಳನ್ನು ಬರೆಯುವುದು, ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ವತಿಯಿಂದ ಕೊಡಮಾಡುವ ಸೌಲಭ್ಯಗಳನ್ನು ದೆಹಲಿಯ ಕನ್ನಡ ವಿದ್ಯಾಸಂಸ್ಥೆಗೆ ಕೊಡಿಸಬೇಕು, ಬಿವಾಡಿ ಹಾಗೂ ಗುರುಗ್ರಾಮ ಕನ್ನಡ ಸಂಘಗಳ ಕನ್ನಡ ಕಲಿಕಾ ಕೇಂದ್ರಗಳಿಗೆ ಧನಸಹಾಯ ನೀಡುವುದು ಮುಂತಾದ ಬೇಡಿಕೆಗಳನ್ನು ನಿಯೋಗಕ್ಕೆ ಸಲ್ಲಿಸಲಾಯಿತು. ಈ ಎಲ್ಲ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಪ್ರಾಧಿಕಾರ ತಿಳಿಸಿದೆ.

*ಸಿ.ಎಂ.ನಾಗರಾಜ*
*ಪ್ರಧಾನ ಕಾರ್ಯದರ್ಶಿ*

### ದೆಹಲಿ ಕರ್ನಾಟಕ ಸಂಘದಲ್ಲಿ
## ತಿಂಗಳ ಕಾರ್ಯಕ್ರಮ

**14 ಮಾರ್ಚ್ 2020** **ಶನಿವಾರ**

ನಾಗತಿಹಳ್ಳಿ ಚಂದ್ರಶೇಖರ್ ಅವರ **'ಇಂಗ್ಲೆಂಡ್ ವರ್ಸಸ್ ಇಂಡಿಯಾ'** ಚಲನಚಿತ್ರ ಪ್ರದರ್ಶನ

**15 ಮಾರ್ಚ್ 2020** **ಭಾನುವಾರ**

ಹಲಸಂಗಿ ಗೆಳೆಯರ ಪ್ರತಿಷ್ಠಾನ, ವಿಜಯಪುರ ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ

ವಿಚಾರ ಸಂಕಿರಣ

**'ಹಲಸಂಗಿ ಗೆಳೆಯರ ಜೀವನ ಸಾಧನೆ'**

ಹಾಗೂ ಹಲಸಂಗಿ ಗೆಳೆಯರ ಅನುಭಾವ ಗೀತೆ, ಲಾವಣಿ, ಗರತಿಯ ಹಾಡು

**22 ಮಾರ್ಚ್ 2020** **ಭಾನುವಾರ**

ಟಿ.ಎಸ್. ನಾಗಾಭರಣ ನಿರ್ದೇಶನದ **"ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ"** ಸಂಗೀತಮಯ ನಾಟಕ. ಪ್ರಸ್ತುತಿ "ಬೆನಕ" ಮತ್ತು "ಸಂಗೀತ ಸಂಭ್ರಮ" ತಂಡ ಬೆಂಗಳೂರು

## ವಾರ್ಷಿಕ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ, 2019-20ನೇ ಸಾಲಿನ ವಿವಿಧ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿದೆ. ಮಾರ್ಚ್ 22ರಂದು ಸಾಂಸ್ಕೃತಿಕ ಸ್ಪರ್ಧೆ ಮತ್ತು ಒಳಾಂಗಣ ಕ್ರೀಡೆಗಳನ್ನು ಸಂಘದಲ್ಲಿ ಹಾಗೂ ಏಪ್ರಿಲ್ 5ರಂದು ಟ್ರ್ಯಾಕ್ ಇವೆಂಟ್ಸ್‌ಗಳನ್ನು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಆಯೋಜಿಸಿದೆ. ಸಂಘದ ಸದಸ್ಯರು ಮತ್ತು ಅವರ ಮಕ್ಕಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ. ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ

*ಸಿ.ಎಂ.ನಾಗರಾಜ*
*ಪ್ರಧಾನ ಕಾರ್ಯದರ್ಶಿ*

# ಮನರಂಜಿಸಿದ ಏಕಾಂಕ ನಾಟಕೋತ್ಸವ




ದೆಹಲಿ ಕರ್ನಾಟಕ ಸಂಘದ 2019ನೇ ಸಾಲಿನ ಏಕಾಂಕ ನಾಟಕೋತ್ಸವವು ದಿನಾಂಕ 01.02.20 ಮತ್ತು 02.02.20ರಂದು ಸಂಘದ ಸಭಾಂಗಣದಲ್ಲಿ ನಡೆಯಿತು. ನಾಟಕೋತ್ಸವವನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಸಾಹಿತಿ, ಸಂಘದ ಮಾಜಿ ಅಧ್ಯಕ್ಷ ದಿ. ಎನ್.ಪಿ. ಭಟ್ ಅವರಿಗೆ ಈ ನಾಟಕೋತ್ಸವವನ್ನು ಅರ್ಪಿಸಲಾಯಿತು. ದೆಹಲಿ ಕಲಾವಿದರ ಬಳಗ, ಡೆಲ್ಲಿ ಫ್ರೆಂಡ್ಸ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘ ಮೂರು ತಂಡಗಳು ನಾಟಕೋತ್ಸವದಲ್ಲಿ ಭಾಗವಹಿಸಿದ್ದವು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶಿವಾನಂದ ಇಂಗಳೇಶ್ವರ ಮತ್ತು ಶಿವಪ್ಪ ಎಂ., ಡೆಲ್ಲಿ ಫ್ರೆಂಡ್ಸ್ ತಂಡದ ಶ್ರೀಮತಿ ಅಶ್ವಿನಿ ಬಿ.ಎಸ್., ದೆಹಲಿ ಕಲಾವಿದರ ಬಳಗ ತಂಡದ ಎಸ್. ಕುಮಾರ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದ ನಾರಾಯಣ ಬಿ. ಉಪಸ್ಥಿತರಿದ್ದರು.

ನಂತರ ಬೇಲೂರು ಕೃಷ್ಣಮೂರ್ತಿ ಅವರು ರಚಿಸಿದ 'ಗಂಡೊಂದು ಹೆಣ್ಣಾರು', ' ಘಾಟಿ ಮುದುಕಿ" ಮತ್ತು 'ಕುದುರೆ ಮೊಟ್ಟೆ' ನಾಟಕಗಳು ಪ್ರದರ್ಶನಗೊಂಡವು.

ನಾಟಕೋತ್ಸವ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ದೆಹಲಿ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ.ಟಿ.ಎಸ್.ಸತ್ಯನಾಥ್ ಭಾಗವಹಿಸಿದರು. ಅವರು ಮಾತನಾಡಿ ಹಾಸ್ಯ ಪ್ರಜ್ಞೆಯನ್ನು ಹೊಂದಿದ್ದ ಸಂಘದ ಮಾಜಿ ಅಧ್ಯಕ್ಷ ದಿ.ಎನ್.ಪಿ.ಭಟ್ ಅವರಿಗೆ ಹಾಸ್ಯ ನಾಟಕಗಳ ಪ್ರದರ್ಶನದ ಮೂಲಕ ಅರ್ಥಪೂರ್ಣವಾಗಿ ರಂಗ ನಮನ ಸಲ್ಲಿಸಿದೆ ಎಂದರು. ನಾಟಕಗಳೂ ಸೇರಿದಂತೆ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿಗೆ ಭಟ್ಟರು ಪ್ರೋತ್ಸಾಹ ನೀಡಿದ್ದರು ಎಂದವರು ಸ್ಮರಿಸಿಕೊಂಡರು.  ಕೆಲವು ನಾಟಕಗಳಲ್ಲಿ ಧಾರ್ಮಿಕ ಅಂಶಗಳು ಇದ್ದರೂ ಸಹೃದಯರು ನಾಟಕವನ್ನು ಕಲಾಭಿರುಚಿಯಿಂದ ಆಸ್ವಾದಿಸುತ್ತಾರೆ ಎಂದು ಅಭಿಪ್ರಾಯಪಟ್ಟ ಡಾ.ಸತ್ಯನಾಥ್ ಅವರು ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ 'ಕುದುರೆಮೊಟ್ಟೆ'  ನಾಟಕವನ್ನು ನಿದರ್ಶನವಾಗಿ ನೀಡಿದರು.

ಸುಮಾರು ಏಳು ವರ್ಷಗಳ ನಂತರ ಮತ್ತೆ ಸಂಘದಲ್ಲಿ ಏಕಾಂಕ ನಾಟಕೋತ್ಸವವನ್ನು ಆಯೋಜಿಸಲಾಗಿದೆ.  ಮುಂದಿನ ದಿನಗಳಲ್ಲಿ ಸ್ಪರ್ಧಾತ್ಮಕವಾಗಿ ಹಮ್ಮಿಕೊಳ್ಳಲಾಗುವುದು ಎಂದು ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ತಿಳಿಸಿದರು. ಕಾರ್ಯಕ್ರಮವನ್ನು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ನಿರೂಪಿಸಿ ವಂದಿಸಿದರು.



**'ಗಂಡೊಂದು ಹೆಣ್ಣಾರು' ನಾಟಕದ ದೃಶ್ಯ**



'ಘಾಟಿ ಮುದುಕಿ' ನಾಟಕದ ದೃಶ್ಯ



'ಕುದುರೆ ಮೊಟ್ಟೆ' ನಾಟಕದ ದೃಶ್ಯ

**ಮನರಂಜಿಸಿದ ನಾಟಕಗಳು**

ದಿನಾಂಕ 01.02.2020ರಂದು ದೆಹಲಿ ಕಲಾವಿದರ ಬಳಗ ಪ್ರಸ್ತುತಪಡಿಸಿದ ಬೇಲೂರು ಕೃಷ್ಣಮೂರ್ತಿ ರಚನೆಯ, ಮೈಲಾರಪ್ಪ ಟಿ.ಎಂ. ವಿನ್ಯಾಸ ಮತ್ತು ನಿರ್ದೇಶನದ **'ಗಂಡೊಂದು ಹೆಣ್ಣಾರು'** ನಾಟಕ ಪ್ರದರ್ಶನಗೊಂಡಿತು.

ಜಾಗತಿಕ ಯುಗದಲ್ಲಿ ತಂತ್ರಜ್ಞಾನ ಅಭಿವೃದ್ಧಿಗೊಂಡಂತೆ ಮಾನವ ಜೀವನದಲ್ಲಿಯೂ ಸಾಕಷ್ಟು ಬದಲಾವಣೆಗಳು ಕಾಣಸಿಗುತ್ತಿವೆ. ಮಾನವನ ಹಿಂದಿನ ಆಚಾರ-ವಿಚಾರಗಳು, ಜೀವನ ಶೈಲಿಯಲ್ಲಿಯೂ ಸಹ ಸಾಕಷ್ಟು ಏರು-ಪೇರುಗಳು ಕಾಣ ಸಿಗುತ್ತವೆ. ಹಾಗಾಗಿ ಅವಿವಾಹಿತನೊಬ್ಬನಿಗೆ ಬಾಡಿಗೆ ಮನೆ ಅವಶ್ಯಕತೆ ಇದ್ದು, ಬಾಡಿಗೆಗೆ ಮನೆ ನೀಡುವ ಮಾಲೀಕರು, ತಮ್ಮ ಹಳೆಯ ಸಂಪ್ರದಾಯಗಳಿಗೆ ಹೊಂದಿಕೊಂಡಿದ್ದು ಮನೆ ಬಾಡಿಗೆಗೆ ನೀಡಲು ಹತ್ತು ಹಲವು ನಿರ್ಬಂಧ/ ನಿಯಮಗಳನ್ನು ವಿಧಿಸಿರುತ್ತಾರೆ. ಇದರ ಮಧ್ಯೆ ಅವಿವಾಹಿತರು ಮನೆ ಬಾಡಿಗೆ ಪಡೆಯಲು ಏನೆಲ್ಲಾ ಮಸಲತ್ತುಗಳನ್ನು ನಡೆಸುತ್ತಾರೆ, ಕೊನೆಗೆ ಏನೆಲ್ಲಾ ಆಗುತ್ತದೆ... ಎಂಬುದನ್ನು ಹಾಸ್ಯಮಯವಾಗಿ ಪ್ರದರ್ಶಿಸಿದ ಈ ನಾಟಕ ದೆಹಲಿ ಕನ್ನಡಿಗರನ್ನು ನಗೆಗಡಲಲ್ಲಿ ತೇಲಿಸಿತು.

ರಂಗದ ಮೇಲೆ ಮಹಾದೇವ, ಎಸ್. ಕುಮಾರ, ಅಮರೇಶ್, ಪ್ರದೀಪ್, ಕೃಷ್ಣರಾಜ್ ಕೆ.ಎನ್., ರಾಘವೇಂದ್ರ ನಾಯಕ್ ಅಭಿನಯಿಸಿ ಗಮನ ಸೆಳೆದರು.

ನಾಟಕಕ್ಕೆ ರಾಘವೇಂದ್ರ ನಾಯಕ್ ಬೆಳಕು, ಸಂತೋಷ್‌ಕುಮಾರ್ ಉಪಾಧ್ಯಾಯ, ಎಸ್. ಕುಮಾರ್ ಮತ್ತು ಅಮರೇಶ್ ಸಂಗೀತ, ಪ್ರಸಾದನ-ಟಿ.ಎಂ. ಮೈಲಾರಪ್ಪ ಪ್ರಸಾಧನ, ರಾಘವೇಂದ್ರ ನಾಯಕ್, ಅಜಿತ್ ಮತ್ತು ಅಮೃತ್ ಎಚ್.ಆರ್ ರಂಗಸಜ್ಜಿಕೆಯಲ್ಲಿ ಸಹಕರಿಸಿದರು.

ದಿನಾಂಕ 02.02.2020ರಂದು ಡೆಲ್ಲಿ ಫ್ರೆಂಡ್ಸ್ ಪ್ರಸ್ತುತಪಡಿಸಿದ ಬೇಲೂರು ಕೃಷ್ಣಮೂರ್ತಿ ರಚನೆಯ, ಮೈಲಾರಪ್ಪ ಟಿ.ಎಂ. ವಿನ್ಯಾಸ ಮತ್ತು ನಿರ್ದೇಶನದ **'ಘಾಟಿ ಮುದುಕಿ'** ನಾಟಕ ಪ್ರದರ್ಶನಗೊಂಡಿತು.

ಆಧುನಿಕ ಕಾಲದಲ್ಲಿ ತಂತ್ರಜ್ಞಾನ ಬೆಳೆದಂತೆ ಮನುಷ್ಯ ಮಾನವೀಯ ಮೌಲ್ಯಗಳನ್ನು, ಆತ್ಮೀಯ ಸಂಬಂಧಗಳನ್ನು ಮರೆಯುತ್ತಾ ಹೋಗುತ್ತಿರುವ ಇಂದಿನ ಧಾವಂತದ ದಿನಗಳಲ್ಲಿ ನಮ್ಮ ಹಿರಿಯರು ತಮ್ಮ ಸಂಸ್ಕೃತಿ, ಸಂಪ್ರದಾಯ ಹಾಗೂ ಶಾಸ್ತ್ರಗಳ ಅರಿವಿನೊಂದಿಗೆ ಮಾನವೀಯ ಸಂಬಂಧ ಹಾಗೂ ಮೌಲ್ಯಗಳ ಮಹತ್ವವನ್ನು ಮುಂದಿನ ಪೀಳಿಗೆಯೂ ಸಹ ಅರಿತುಕೊಂಡು ಮುಂದುವರಿಸಿಕೊಂಡು ಹೋಗುತ್ತಾರೆ ಎಂಬ ಭರವಸೆಗಳೊಂದಿಗೆ ತಮ್ಮ ಕೊನೆಯ ಕಾಲದಲ್ಲಿ ಅವರ ಆಸೆ, ಆಕಾಂಕ್ಷೆ, ಕನಸುಗಳು ಹಾಳಾಗದಂತೆ ಹೇಗೆ ಚಾಣಾಕ್ಷತನವನ್ನು ತೋರಿಸುತ್ತಾರೆ ಎನ್ನುವುದೇ ಈ ನಾಟಕದ ತಿರುಳು.

ರಂಗದ ಮೇಲೆ ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀಮತಿ ಆಶಾಲತ ಎಂ., ಕು. ರಮ್ಯ, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಶ್ರೀದೇವಿ ಕಲಾವಿದರಾಗಿ ಭಾಗವಹಿಸಿ ಸ್ಮರಣೀಯ ಅಭಿನಯ ನೀಡಿದರು.


ರಾಘವೇಂದ್ರ ನಾಯಕ್ ಬೆಳಕು, ಸಂತೋಷ್‌ಕುಮಾರ್ ಉಪಾಧ್ಯಾಯ ಮತ್ತು ಅಮರೇಶ್ ಸಂಗೀತ, ಟಿ.ಎಂ. ಮೈಲಾರಪ್ಪ ಪ್ರಸಾಧನ, ರಾಘವೇಂದ್ರ ನಾಯಕ್, ಅಜಿತ್ ಮತ್ತು ಅಮೃತ್ ಎಚ್.ಆರ್. ರಂಗಸಜ್ಜಿಕೆ ನೀಡಿ ಸಹಕರಿಸಿದರು.

ಫೆಬ್ರವರಿ 2ರಂದು ದೆಹಲಿ ಒಕ್ಕಲಿಗ ಗೌಡ ಸಂಘ (ರಿ) ಪ್ರಸ್ತುತಪಡಿಸಿದ ಬೇಲೂರು ಕೃಷ್ಣಮೂರ್ತಿ ರಚನೆಯ, ನಾರಾಯಣ ಬಿ., ಪರಿಕಲ್ಪನೆ ಮತ್ತು ನಿರ್ದೇಶನದ **'ಕುದುರೆ ಮೊಟ್ಟೆ'** ನಾಟಕ ಪ್ರದರ್ಶನಗೊಂಡಿತು.

ಒಬ್ಬ ಮುಗ್ಧ ಗುರು ಮತ್ತು ಇವರ ಮುಗ್ಧ ಶಿಷ್ಯರುಗಳ ದೈನಂದಿನ ಕಾರ್ಯಭಾರವೇ ಈ ನಾಟಕದ ಕಥಾವಸ್ತು. ಗುರುಗಳು ತಮ್ಮ ಶಿಷ್ಯರೊಂದಿಗೆ ಪಾಠ ಪ್ರವಚನಗಳನ್ನು ನಡೆಸುವಾಗ ತೆರೆದುಕೊಳ್ಳುವ ವಿನೋದ, ಈ ನಡುವೆ ಗುರುಗಳ ಉಪಯೋಗಕ್ಕಾಗಿ ಒಂದು ಕುದುರೆ ಕೊಳ್ಳಲು ಶಿಷ್ಯನೊಬ್ಬ ಹೂಡುವ ಉಪಾಯ ಮತ್ತು ಅದರ ಫಲಿತಾಂಶ. ಆಶ್ರಮದ ಭಕ್ತರಲ್ಲೊಬ್ಬರ ಗೃಹ ಪ್ರವೇಶದ ಸಂದರ್ಭದಲ್ಲಿ ಅವರಿಗೆ ಮುಗ್ಧ ಶಿಷ್ಯರಿಂದಾಗುವ ಅವಮಾನ, ಇದರ ಪ್ರತಿಶೋಧಕ್ಕಾಗಿ ಆತ ಹೆಣೆದ ಪ್ರತಿತಂತ್ರ ಹಾಗೂ ಆತನ ಪ್ರತಿತಂತ್ರಕ್ಕೆ ಆಶ್ರಮದ ಗುರು-ಶಿಷ್ಯರು ಹೇಗೆ ಸಂಕಷ್ಟಕ್ಕೆ ಒಳಗಾಗುತ್ತಾರೆ ಎನ್ನುವುದೇ ನಾಟಕದ ವಸ್ತು.

ರಂಗದ ಮೇಲೆ ಎ.ಟಿ. ಶ್ರೀನಿವಾಸ್, ನಾರಾಯಣ.ಬಿ., ಗಿರೀಶ್ ಎಸ್., ಮೋಹನ್ ಕುಮಾರ್, ಕೆ.ಪಿ ಮೋಹನ್ ಕುಮಾರ್, ಶ್ರೀಮತಿ ಮಂಜುಳಾ ನಾಗರಾಜ್, ಕುಮಾರ್, ಅಜಯ್ ಕುಮಾರ್ ಹಾಸ್ಯ ಕಲಾವಿದರಾಗಿ ಭಾಗವಹಿಸಿ ಬಹುಕಾಲ ನೆನೆಯುವಂತ ಪ್ರದರ್ಶನ ನೀಡಿದರು.

ಶಿವಾನಂದ ಇಂಗಳೇಶ್ವರ ಬೆಳಕು, ಎಸ್. ಕುಮಾರ್ ಮತ್ತು ದಯಾನಂದ ಬಿಂಗೆ ಸಂಗೀತ, ಟಿ.ಎಂ. ಮೈಲಾರಪ್ಪ ಪ್ರಸಾಧನ, ಪ್ರಶಾಂತ್ ಕುಮಾರ್ ಬಿ.ಆರ್. ಮತ್ತು ಅಜಯ್ ಕುಮಾರ್ ರಂಗಸಜ್ಜಿಕೆಯಲ್ಲಿ ಸಹಕರಿಸಿದರು.




ಡಾ.ಟಿ.ಎಸ್.ಸತ್ಯನಾಥ್ ಮಾತನಾಡುತ್ತಿರುವುದು

# ನಕ್ಕು ನಗಿಸಿದ ಗಂಭೀರ ನಾಟಕ-'ಕುದುರೆ ಮೊಟ್ಟೆ'



ಆರಂಭದಿಂದ ಕೊನೆಯ ತನಕವೂ ನಾಟಕದ ಸಂಭಾಷಣೆಗೆ ಸಮರ್ಥವಾಗಿಯೇ ಜೀವ ತುಂಬಿದ ದೆಹಲಿ ಒಕ್ಕಲಿಗ ಗೌಡ ಸಂಘದ ಕಲಾವಿದರು ಪ್ರಸ್ತುತಪಡಿಸಿದ ಬೇಲೂರು ಕೃಷ್ಣಮೂರ್ತಿಯವರ ನಾಟಕ 'ಕುದುರೆ ಮೊಟ್ಟೆ' ಪ್ರೇಕ್ಷಕರನ್ನು ನೆಗೆಗಡಲಲ್ಲಿ ಮುಳುಗಿಸಿತ್ತು. ಕಲಾವಿದರೆಲ್ಲರು ಪರಿಚಯದವರೆ. ಅವರ ಕೌಶಲ್ಯವನ್ನು ಮೊದಲೇ ಒಂದಿಷ್ಟು ಅರಿತಿದ್ದರಿಂದ ಈ ನಾಟಕವನ್ನು ಟೀಕೆಯ ದೃಷ್ಟಿಯಿಂದಲೇ ಗಮನಿಸಿದೆ. ಕುದುರೆ ಮೊಟ್ಟೆಯ ದೃಶ್ಯ ಎರಡನೇ ದೃಶ್ಯಕ್ಕೆ ಮುಗಿದರೂ, ಇದಕ್ಕೆ 'ಕುದುರೆ ಮೊಟ್ಟೆ' ಎಂದಿಡಲು ಕಾರಣವೇನು? ಎಂದು ಯೋಚಿಸುತ್ತಿದ್ದಂತೆ, 2004ರಲ್ಲಿ ಒಂಬತ್ತನೆಯ ಮುದ್ರಣ ಕಂಡ ಈ ನಾಟಕದ ಅಂತಃಸತ್ವ ಇದ್ದುದು ಅದು ಸದಾಕಾಲ ಸಮಕಾಲೀನ ನಾಟಕವಾದ್ದರಿಂದಲೇ ಎಂಬ ಅರಿವಾಗುತ್ತದೆ.

ನಾಟಕದ ಕರ್ತೃ ಶ್ರೀ ಬೇಲೂರು ಕೃಷ್ಣಮೂರ್ತಿಯರೇ ತಮ್ಮ ಮುನ್ನುಡಿಯಲ್ಲಿ ಬರೆದಂತೆ, ಅವರ ತಂದೆ ಶ್ರೀ ಅನಂತರಾಮಯ್ಯನವರು ಅವರಿಗೆ ಬಾಲ್ಯದಲ್ಲಿ ಹೇಳಿದ ಕತೆಯನ್ನು ತದನಂತರ ನಾಟಕರೂಪಕ್ಕೆ ಭಟ್ಟಿ ಇಳಿಸಿದ್ದರಂತೆ. ನಿಜ. ಆಗಿನ್ನೂ ಬಹುಶಃ ಸ್ವತಂತ್ರ ಭಾರತದ ಪ್ರಾರಂಭದಲ್ಲಿ ರಾಜಕೀಯವನ್ನೋ, ವ್ಯವಸ್ಥೆಯನ್ನೋ ಅಣಕಿಸುವ ತಂತ್ರಗಾರಿಕೆಯ ಫಲವಾಗಿ ಹಲವಾರು ನಾಟಕಗಳನ್ನು ಹಿರಿಯರು ಬರೆದಿದ್ದರು. ಬೇಂದ್ರೆಯವರ 'ಜಾತ್ರೆ' ಅಥವಾ 'ಸಾಯೋಆಟ' ಮುಂತಾದ ನಾಟಕಗಳು ಬೇರೆ ಬೇರೆ ರೀತಿಯಲ್ಲಿ ಪ್ರಸ್ತುತಗೊಂಡಿರುವುದು ನನಗೀಗಲೂ ನೆನಪಿದೆ. ಕುದುರೆ ಮೊಟ್ಟೆ ನಾಟಕದಲ್ಲೂ ವ್ಯವಸ್ಥೆಯನ್ನು ಅಣಕಿಸುವ ಹಾಗೂ ಕೆಣಕುವ ಪರಿ ಮಾತ್ರ ಅದ್ಭುತವಾಗಿದೆ. ತಾನೇ ಬುದ್ಧಿವಂತ, ತನಗೇ ಎಲ್ಲ ತಿಳಿದಿದೆ ಎನ್ನುವ ಮೂರ್ಖ ಶಿಷ್ಯಂದಿರೇ ಇಲ್ಲಿನ ಕಥಾವಸ್ತು. ಯಾವ ರಾಜಕೀಯ, ಸರಕಾರ, ಪಕ್ಷಗಳು, ವ್ಯಕ್ತಿಗಳ ಹೆಸರನ್ನೇ ಹೇಳದೆ, ಇವೆಲ್ಲರನ್ನು, ಎಲ್ಲವನ್ನು ಒಳಗೊಂಡ ವ್ಯವಸ್ಥೆಯ ಅಣಕ ಈ ನಾಟಕದ ನಗೆಯ ಒಳಗಿನ ರಕ್ತ ಸಂಚಲನೆ.

ಗುರುಗಳಿಗೂ ಕುದುರೆ ಇದ್ದರೆ ಒಳ್ಳೆಯದು, ಆದರೆ, ಕುದುರೆ ಮೊಟ್ಟೆ ತಂದರೆ ಖರ್ಚು ಕಡಿಮೆ ಎನ್ನುವ ಶಿಷ್ಯ ವೆಂಕನ ಸಲಹೆ, ಮೊಟ್ಟೆ ತಂದರೆ ಮರಿ ಮಾಡಲು ಕಾವು ಕೊಡಬೇಕು; ಆದರೆ ಕಾವು ಕೊಡುವವರು ಯಾರೆಂದು ಗುರು ಗೋವಿಂದನ ಪ್ರಶ್ನೆಗೆ ನಾನೊಲ್ಲೆ ನಾನೊಲ್ಲೆ ಎಂದು ಜಾರಿ ಕೊಳ್ಳುವ ಶಿಷ್ಯರು, ಕೊನೆಗೆ ಕುದುರೆ ಮೊಟ್ಟೆ ಖರೀದಿ ಮಾಡಲು ಬಂದು, ಕುಂಬಳಕಾಯಿ ಒಂದಕ್ಕೆ 100 ರೂಪಾಯಿ ಕೊಟ್ಟ ರಂಗ ಎಂಬ ಕುದುರೆ ಕಾಯುವವನಿಂದ ಕುದುರೆ ಮೊಟ್ಟೆ (ಕುಂಬಳ ಕಾಯಿ) ಖರೀದಿಸುತ್ತಾರೆ. ಅದನ್ನು ಬುದ್ಧಿವಂತರಾದವರೇ, ಹೊತ್ತೊಯ್ಯಬೇಕು ಎಂದು ರಂಗ ಅಂದಾಗ, ಚಪ್ಪಲಿ ಚಿಕ್ಕದಾಯಿತೆಂದು ಕಾಲನ್ನೆ ಕತ್ತರಿಸಿ ತನ್ನ ಜಾಣತನ ತೋರಿದ ಸೀನ, ಆಶ್ರಮದಲ್ಲಿ ತಿಗಣೆ ಇದೆ ಎಂದು ಆಶ್ರಮಕ್ಕೆ ಬೆಂಕಿ ಇಟ್ಟ ವೆಂಕರ ನಡುವೆ ತಮ್ಮ ಜಾಣತನದ ಕುರಿತು ತಿಕ್ಕಾಟವಾದಾಗ, ದೂರದಲ್ಲಿರುವ ಹಳ್ಳದ ತನಕ ಒಬ್ಬ, ನಂತರ ಮತ್ತೊಬ್ಬ ಒಯ್ಯಲಿ ಎಂದು ತೀರ್ಪು ನೀಡುತ್ತಾನೆ ರಂಗ. ನಮ್ಮ ಬದುಕಿನಲ್ಲಿ ನಾವು ಕಾಣುವಂತಹ ಅವಿದ್ಯಾವಂತ ಜ್ಞಾನಿಗಳು ಹಾಗೂ ವಿದ್ಯಾವಂತ ಅಜ್ಞಾನಿಗಳನ್ನು ನಾಟಕದಲ್ಲೂ ಸಹಜವಾಗಿ ತೋರಿಸಲಾಗಿದೆ. ಕೊನೆಗೂ ಕುಂಬಳಕಾಯಿ ಬಿದ್ದು ಒಡೆದು ಹೋಯಿತು. ಅದರಲ್ಲೆ ಉದ್ದ ಕಿವಿಯ ಕುದುರೆ ಮರಿ ಓಡಿ ಹೋದದ್ದನ್ನು ಶಿಷ್ಯರು ವಿವರಿಸಿದಾಗ, ಮರಿಯೂ ಅಷ್ಟು ಜೋರಾಗಿ ಓಡಿದರೆ, ದೊಡ್ಡ ಕುದುರೆ ಅಪಾಯಕಾರಿ ಆಗುತ್ತಿತ್ತು ಎಂದು ಗೋವಿಂದ ಹೇಳಿದ ಸಮಾಧಾನ ನಿಜ ಜೀವನದಲ್ಲಿ ನಾವು ಸಹ ಮಾಡುವಂತಹ ಎಡವಟ್ಟು.

ಏಕೆ, ಏನು, ಹೇಗೆ, ಯಾವಾಗ ಎಂಬ ವಿವೇಚನೆ ಇಲ್ಲದೆ ಹೇಳಿದ್ದನ್ನಷ್ಟೇ ಮಾಡುವ ಶಿಷ್ಯರು, ದೇಶದ ಅಂಧಾಕಾನೂನು, ಹಾಗೂ ಆಡಳಿತದ ಪ್ರತಿರೂಪ. ತಮ್ಮ ಗುರುಗಳ ಶಲ್ಯವೇ ಆದರೂ ಅವರು ಹೇಳದೆ ತಂದು ಕೊಡದ ಶಿಷ್ಯರು. ನಮಗೆ ಸಂಬಂಧ ಪಟ್ಟದ್ದು, ಏನೇ ಬಿದ್ದಿದ್ರೂ ತರಬೇಕು ಎನ್ನುವ ಗುರು ಆಜ್ಞೆಯನ್ನು ಪಟ್ಟಿಮಾಡಿ ಬರೆದು, ಗುರುಗಳೇ ಹಳ್ಳಕ್ಕೆ ಬಿದ್ದಾಗ ಆ ಪಟ್ಟಿಯಂತೆ ಒಂದೊಂದೇ ವಸ್ತುವನ್ನು ಗುರುವಿನ ಮೈಯಿಂದಲೇ ಎತ್ತಿ ತಂದರು ಶಿಷ್ಯ ಶಿಖಾಮಣಿಗಳು. ದೆಹಲಿಯಲ್ಲೇ ತಮ್ಮ ಕೆಲಸ ಆದರಾಯಿತು ಎಂದು ಹೊಸದಾಗಿ ನಿರ್ಮಿಸಿದ ರಸ್ತೆ ಅಗೆದು, ಕೇಬಲ್ ಹಾಕುವ ವಿದ್ಯುತ್ ಪೂರೈಕೆ ಅವರು; ಕೆಲಸ ಮುಗಿಸಿದ ತಕ್ಷಣ, ಪುನಃ ರಸ್ತೆ ಅಗೆದು ತಮ್ಮ ಇಲಾಖೆಯ ಕೆಲಸ ಮಾಡ ಹೊರಡುವ ಜಲಮಂಡಳಿಗಳ ಕೆಲಸಗಳನ್ನು ನಮಗೆ ನೆನಪಿಸುತ್ತವೆ.

ಹಾಲು ಕರೆಯಲು ಹಸುವಿನ ಕಾಲು ಕಟ್ಟಬೇಕು, ಕೊಂಬು ಹಿಡಿಯಬೇಕೆಂದು ಹಸು ದಾನ ಮಾಡಿದ ರಾಮಯ್ಯ ಹೇಳಿದಂತೆ, ಗುರುಗಳನ್ನು ಹಸುವಿನ ಕಾಲಿಗೆ ಕಟ್ಟಿ, ಕೊಂಬು ಕಹಳೆ ಊದಿದಾಗ ಹೆದರಿದ ಹಸು ಓಡಿದಾಗ ಹಳ್ಳಕ್ಕೆ ಬಿದ್ದವರು ಈ ಶಿಷ್ಯರನ್ನು ಸಾಕಿದ ಗುರು. ಗುರುವಿನ ಪ್ರಾಣ ಹೋಗದಂತೆ ಮೂಗು, ಬಾಯಿ, ಕಿವಿ, ಕಣ್ಣುಗಳನ್ನು ಭದ್ರವಾಗಿ ಹಿಡಿದಾಗ ಉಸಿರುಗಟ್ಟಿದ ಗುರು, ಈ ವ್ಯವಸ್ಥೆಯ ಪ್ರತಿಬಿಂಬ.

ದೆಹಲಿಯ ನಾಟಕಗಳಲ್ಲಿ ಅಜೇಯ ಹಾಸ್ಯ ಕಲಾವಿದ ಎಂದೇ ಗುರುತಿಸಲ್ಪಟ್ಟ ನಾರಾಯಣ ಅವರ ನಿರ್ದೇಶನದಲ್ಲಿ ಮೂಡಿ ಬಂದ ಈ ನಾಟಕ, ಅವರ ನಿರ್ದೇಶನಾ ಜಾಣ್ಮೆಗೆ ಒಂದು ನಿದರ್ಶನವಾಯಿತು. ನಾಲ್ಕು ಜನ ಮೂರ್ಖ ಶಿಷ್ಯರಲ್ಲಿ ಒಬ್ಬರಾಗಿ, ತಾವು ಜನಿವಾರವನ್ನೇ ತಮ್ಮ ನಾಟಕದ ಪ್ರಾಪರ್ಟಿಯಾಗಿ ಬಳಸಿಕೊಂಡು, ಇರುವ ನಾಲ್ಕು ಮಂದಿ ಮೂರ್ಖರಲ್ಲಿ ಅತೀ ಬುದ್ಧಿವಂತ ಎನಿಸಿಕೊಂಡರೆ, ಮೊದಲ ಬಾರಿ ನಾಟಕ ಪ್ರವೇಶಿಸಿದ ಕೆ.ಪಿ. ಮೋಹನ ಕುಮಾರ್ ನಾಟಕದುದ್ದಕ್ಕೂ, ತನ್ನ 'ಬೆಪ್ಪು' ಸ್ವರೂಪವನ್ನು ಬಹಳ ಅಚ್ಚುಕಟ್ಟಾಗಿಯೇ ನಿರ್ವಹಿಸಿದರು. ನಾಟಕದಲ್ಲಿ ಪ್ರೇಕ್ಷಕರನ್ನು ಒಳಗೊಳ್ಳಬೇಕೆಂಬ ಸೂತ್ರವನ್ನು ಚೆನ್ನಾಗಿಯೇ ಅರಿತಿರುವ ಗಿರೀಶ್ ಅವರು ತಮ್ಮ ಪಾತ್ರವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದರೆ, ಮತ್ತೊಬ್ಬ ಶಿಷ್ಯನಾಗಿ ಮೋಹನ್ ಕುಮಾರ್ ತುಂಬಾ ಚೆನ್ನಾಗಿ ಅಭಿನಯಿಸಿದರು.

ಗುರು ಗೋವಿಂದನ ಪಾತ್ರದಲ್ಲಿ ಎ.ಟಿ. ಶ್ರೀನಿವಾಸ್ ಅವರು ಪ್ರಾರಂಭದಿಂದಲೂ ತಮ್ಮ ಸ್ವರವನ್ನು ಎಲ್ಲಾ ಕಡೆಯೂ ನಿಯಂತ್ರಿಸಿ, ಅಸಹಾಯಕ ಗುರುವಿನ ಪಾತ್ರವನ್ನು ಸಹಜವಾಗಿಯೇ ಅಭಿನಯಿಸಿ ಸಾಮಾಜಿಕ ವ್ಯವಸ್ಥೆಯಲ್ಲಿನ ಜನ ಸಾಮಾನ್ಯನ ಪಾತ್ರವನ್ನು ಬಹಳ ಎಚ್ಚರಿಕೆಯಿಂದ ಪ್ರಸ್ತುತಪಡಿಸಿದರು. ಈ ನಾಲ್ವರು ಶಿಷ್ಯರ ಪಾತ್ರ ಚೆನ್ನಾಗಿ ಮೂಡಿ ಬರಲು ಎ.ಟಿ. ಶ್ರೀನಿವಾಸರ ಪಾತ್ರ ತುಂಬಾ ಪೂರಕವಾಯಿತು.

ರಂಗನ ಪಾತ್ರದಲ್ಲಿ ಕುಮಾರ್, ಮೊದಲ ಬಾರಿ ಅಭಿನಯಿಸಿದರೂ ಅವರ ಸಹಜಾಭಿನಯ ಖುಷಿ ತಂದಿತ್ತು. ಶಿಷ್ಯರ ಮೂರ್ಖತನಕ್ಕೆ ಮದ್ದರೆದ ರಾಮಯ್ಯನ ಪಾತ್ರವನ್ನು ನಿರ್ವಹಿಸಿದ ಶ್ರೀಮತಿ ಮಂಜುಳಾ ನಾಗರಾಜ ಅವರಿಗೆ ಹಾಸ್ಯದ ಸಂಭಾಷಣೆಗಳಿಲ್ಲದಿದ್ದರೂ, ಪುರುಷ ಈ ಪಾತ್ರವನ್ನು ನಿರ್ವಹಿಸಿದಾಗ, ಇಡೀ ದೃಶ್ಯವನ್ನು ತಮ್ಮ ಗಾಂಭೀರ್ಯ, ನಿಲುವು, ನಡೆಗಳ ಮೂಲಕವೇ ರಂಗ ನಿಯಂತ್ರಣವನ್ನು ತಮ್ಮದಾಗಿಸಿದ್ದರು. ಮೈಲಾರಪ್ಪನವರ ಪ್ರಸಾದನ, ವೇಷಭೂಷಣ, ಸಂತೋಷ ಉಪಾಧ್ಯಾಯ ಅವರ ಸಂಗೀತ, ರಾಘವೇಂದ್ರ ನಾಯಕ್, ಪ್ರಶಾಂತ್ ಕುಮಾರ್ ಬಿ.ಆರ್ ಮತ್ತು ಅಜಯ್ ಕುಮಾರ್ ಅವರ ರಂಗಸಜ್ಜಿಕೆ, ಶಿವಾನಂದ ಇಂಗಳೇಶ್ವರರ ಬೆಳಕು ಎಲ್ಲವೂ ಈ ನಾಟಕದ ಒಟ್ಟಂದಕ್ಕೆ ಮೆರುಗು ನೀಡಿವೆ. ಚಳಿಯ ಹವಾಮಾನ ದೆಹಲಿ ಚುನಾವಣೆಯ, ಬಿಸಿಯ ನಡುವೆ, ನಗೆ ನಾಟಕ ಎಲ್ಲರನ್ನೂ ನಗಿಸುವುದರಲ್ಲಿ ಯಶಸ್ವಿಯಾಗಿದೆ.

ಈ ನಾಟಕದ ಕೊನೆಯಲ್ಲಿ 'ತಪ್ಪು ನೀವು ಮಾಡುತ್ತಿಲ್ಲ', ಎಲ್ಲರೂ ತಪ್ಪು ಮಾಡುತ್ತಾರೆ ಎಂಬಲ್ಲಿಗೆ ಜಾನಪದ ಹಾಡಿನ ಕುಣಿತ ಪ್ರಾಯಶಃ ಸರಿಯಾದ ಕೊನೆ ಅಲ್ಲ. ಬದಲಾಗಿ ಗುರು ಗೋವಿಂದ ಸತ್ತಾಗ, 'ಕೆರೆಗೋ, ಬಾವಿಗೋ ಬಿದ್ದು ಸಾಯೋದಲ್ಲ. . . ಇಲ್ಲೇ ಇದ್ದು ಬಡ್ಕೋಳ್ಳೋಣ' ಎಂದು ಹೇಳುವ ಮೂರ್ಖ ಶಿಷ್ಯರ ಮಾತೇ ಹೆಚ್ಚು ಅರ್ಥಪೂರ್ಣವಾಗಿರುತ್ತಿತ್ತು.

*ಸರವು ಕೃಷ್ಣ ಭಟ್ಟ*

# 'ಗಂಡೊಂದು ಹೆಣ್ಣಾರು' ನಾಟಕದ ಯಶಸ್ವಿ ಪ್ರಯೋಗ

ಏಕಾಂಕ ನಾಟಕೋತ್ಸವ 2019ರ ಅಂಗವಾಗಿ ದಿನಾಂಕ 01.02.2020ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಬೇಲೂರು ಕೃಷ್ಣಮೂರ್ತಿ ಅವರು ರಚಿಸಿರುವ ಟಿ.ಎಂ ಮೈಲಾರಪ್ಪ ಅವರ ನಿರ್ದೇಶನದ 'ಗಂಡೊಂದು ಹೆಣ್ಣಾರು' ನಾಟಕ 'ದೆಹಲಿ ಕಲಾವಿದರ ಗೆಳೆಯರ ಬಳಗ'ದ ವತಿಯಿಂದ ಯಶಸ್ವಿ ಪ್ರಯೋಗ ಕಂಡಿತು.



ಸಮಾನ ಮನಸ್ಕ ಕಲಾಭಿರುಚಿ ಇರುವ ತಂಡದ ಎಲ್ಲಾ ಕಲಾವಿದರು ನೀಡಿದ ಮನೋಜ್ಞ ಅಭಿನಯ ದೆಹಲಿ ಕನ್ನಡಿಗರ ಜನಮನ ಸೂರೆಗೊಂಡತು.

ಭೀಮಣ್ಣನ ಪಾತ್ರಧಾರಿಯಾಗಿ ಅಮರೇಶ, ಸೋಮನ ಪಾತ್ರದಲ್ಲಿ ಎಸ್.ಕುಮಾರ್ ಅವರ ಅಭಿನಯ ಮೆಚ್ಚುಗೆಗೆ ಪಾತ್ರವಾಯಿತು. ವಾಸುವಾಗಿ ಹಾಗೂ ಗೆಳೆಯನಿಗಾಗಿ ಸ್ತ್ರೀ ವೇಷ ಧರಿಸಿ ಬಂದು ದ್ವಿಪಾತ್ರದಲ್ಲಿ ಕಾಣಿಸಿಕೊಂಡ ಕೃಷ್ಣ ರಾಜ್ ಪ್ರೇಕ್ಷಕರ ಮನಗೆದ್ದರು.

ರಾಣಿ'ಯಾಗಿ ಪ್ರದೀಪ ಅವರು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ತಿಮ್ಮ ಹಾಗೂ ಗೆಳೆಯನಿಗಾಗಿ ಸ್ತ್ರೀ ವೇಷದ ಪಾತ್ರದಲ್ಲಿ ಬರುವ ಹರಿಪ್ರಿಯ ಅವರ ಅಭಿನಯ ಪ್ರೇಕ್ಷಕರ ಮನದಾಳದಲ್ಲಿ ನೆಲೆನಿಲ್ಲುವಂತೆ ಮಾಡಿತು.

ಯುವಕನ ಪಾತ್ರದಲ್ಲಿ ಮನೆ ಬಾಡಿಗೆಗೆ ಪಡೆಯಬೇಕೆಂಬ ಛಲಬಿಡದ ಮನು (ಮಹದೇವ್) ತನ್ನ ಗೆಳೆಯರನ್ನೇ ಸ್ತ್ರೀ ವೇಷ ಧರಿಸಿ ಬರುವಂತೆ ಕೇಳಿಕೊಂಡು ಒಬ್ಬರು ಬರುವುದು ಮತ್ತೊಬ್ಬರಿಗೆ ಗೊತ್ತಾಗದೇ ಮುಂದೆ ಪೇಚಿಗೆ ಬಿದ್ದು ಅನುಭವಿಸುವ ತಾಪತ್ರಯ ಮನ ಸೆಳೆಯುವ ಅಭಿನಯದ ಮೂಲಕ ಗಮನ ಸೆಳೆದರು.

ಈ ನಾಟಕಕಕ್ಕೆ ಗಮನ ಸೆಳೆಯುವ ರಂಗಸಜ್ಜಿಕೆ ನಿರ್ಮಾಣ ಮಾಡಿದ ಶ್ರೇಯಸ್ಸು ರಾಘವೇಂದ್ರ ನಾಯಕ, ಅಜಿತ್ ಹಾಗೂ ಅಮೃತ ಅವರಿಗೆ ಸಲ್ಲುತ್ತದೆ. ಇವರು ಪಟ್ಟಶ್ರಮ ನೆನಪಿನಾಳದಲ್ಲಿ ಉಳಿಯುವಂತದ್ದು. ಎಲ್ಲಾ ಕಲಾವಿದರುಗಳಿಗೆ ತಾಳ್ಮೆಯಿಂದ ಪಾತ್ರಕ್ಕೆ ತಕ್ಕಂತೆ ಬಣ್ಣ ಹಚ್ಚಿದವರು ಟಿ.ಎಂ. ಮೈಲಾರಪ್ಪ ಅವರು. ಸಂಗೀತದಲ್ಲಿ ಸಂತೋಷ ಉಪಾಧ್ಯಾಯ ಹಾಗೂ ಎಸ್. ಕುಮಾರ್ ಅವರ ಶ್ರಮ ಶ್ಲಾಘನೀಯ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ.ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ, ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ಈ ಸಂದರ್ಭ ಉಪಸ್ಥಿತರಿದ್ದು ನಾಟಕದ ಕಲಾವಿದರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಇನ್ನೂ ಅನೇಕ ಸ್ಥಳೀಯ ಕಲಾರಾಧಕರ ಸಹಯೋಗ ಮತ್ತು ಸಹಕಾರ ಸ್ಮರಣೀಯ.

*ಸವಿತಾ ನೆಲ್ಲಿ*

# ಶ್ರೀಕಂಠ ಚೌಕೀಮಠ ಅವರಿಗೆ ಜಂಗಮವಾಡಿ ಮಠದ ಅಭಿನಂದನೆ

ಉತ್ತರಪ್ರದೇಶ ರಾಜ್ಯದ ದೇವಾಲಯಗಳ ನಗರಿ ವಾರಣಾಸಿಯ ಪ್ರಸಿದ್ಧ ಜಂಗಮವಾಡಿ ಮಠದಲ್ಲಿ ಜನವರಿ 15 ರಿಂದ ಫೆಬ್ರುವರಿ 16 ರವರೆಗೆ ಮಠದ ಗುರುಕುಲದ ಭವ್ಯ ಶತಮಾನೋತ್ಸವ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆ ಉತ್ತರಪ್ರದೇಶ ರಾಜ್ಯದ ಮುಖ್ಯಮಂತ್ರಿ ಶ್ರೀ ಯೋಗಿ ಆದಿತ್ಯನಾಥ್ ನೇರವೇರಿಸಿದರೆ ,ಕಾರ್ಯಕ್ರಮದ ವಿಶೇಷತೆಯಾಗಿದ್ದ "ಸಿದ್ಧಾಂತ ಶಿಖಾಮಣಿ" ಧರ್ಮ ಗ್ರಂಥದ 19 ಭಾಷೆಗಳ ಅನುವಾದಿತ ಪುಸ್ತಕಗಳನ್ನು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಬಿಡುಗಡೆಗೊಳಿಸಿದರು.

ದಿ. 19.01.2020ರಂದು ಕರ್ನಾಟಕದ 20 ನೆ ಶತಮಾನದ ಶಿವಯೋಗಿ ಲಿಂಗೈಕ್ಯ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳ ಸ್ಮರಣೋತ್ಸವ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ದೆಹಲಿ ಕನ್ನಡಿಗ ಶ್ರೀಕಂಠ ಚೌಕೀಮಠ ಅವರು ನಿರ್ದೇಶಿಸಿ, ನಿರ್ಮಿಸಿದ ಸಾಕ್ಷಚಿತ್ರ " ಯುಗ ಪುರುಷ –ಶ್ರೀ ಹಾನಗಲ್ಲ ಕುಮಾರ ಶಿವಯೋಗಿ" ಆಂಗ್ಲ ಭಾಷೆಯ ಅವತರಣಿಕೆ ಯು ಶ್ರೀಮತ್ ಕಾಶೀ ಜ್ಞಾನಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು "ವಿದ್ಯಾವಾಚಸ್ಪತಿ" ಡಾ . ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ವರ ಅಮೃತಹಸ್ತ ದಿಂದ ಅನಾವರಣಗೊಂಡಿತು.



ಚಿತ್ರ ವೀಕ್ಷಿಸಿಸಿದ ಪೂಜ್ಯ ಜಗದ್ಗುರುಗಳು ಶ್ರೀಕಂಠ ಚೌಕೀಮಠ ಅವರನ್ನು ಮತ್ತು ಚಿತ್ರ ನಿರ್ಮಾಣ ಕಾರ್ಯದಲ್ಲಿ ನೆರವಾದ ಅವರ ಪತ್ನಿ ಶ್ರೀಮತಿ ಮಂಗಳ ಚೌಕೀಮಠರನ್ನು ಸನ್ಮಾನಿಸಿ ಆಶೀರ್ವದಿಸಿದರು.

ಸಾಕ್ಷಚಿತ್ರ "ಯುಗ ಪುರುಷ–ಶ್ರೀ ಹಾನಗಲ್ಲ ಕುಮಾರ ಶಿವಯೋಗಿ" ಶೀಘ್ರದಲ್ಲಿ ಕನ್ನಡ,ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಮೂಡಿಬರಲಿದೆ ಶ್ರೀಕಂಠ ಚೌಕಿಮಠ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.

# ಪ್ರೊ. ಕೆ.ಈ ರಾಧಾಕೃಷ್ಣ ಅವರ 'ಯಾರು ಭಾರತ ಮಾತೆ?' ಅನುವಾದಿತ ಕೃತಿ ಬಿಡುಗಡೆ

## ಸಂಘದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಮನಮೋಹನ್ ಸಿಂಗ್




ರಾಷ್ಟ್ರೀಯತೆ ಹಾಗೂ ಭಾರತ ಮಾತಾ ಕೀ ಜೈ ಘೋಷಣೆಯನ್ನು ಭಾರತದ 'ಸಂಪೂರ್ಣ ಭಾವನಾತ್ಮಕ ಹಾಗೂ ಉಗ್ರ ಚಿಂತನೆಯನ್ನು ಕಟ್ಟಲು ದುರ್ಬಳಕೆ ಮಾಡಲಾಗುತ್ತಿದೆ ಎಂದು ಮಾಜೀ ಪ್ರಧಾನಿ ಮನಮೋಹನ್ ಸಿಂಗ್ ವಿಷಾದ ವ್ಯಕ್ತಪಡಿಸಿದರು.

ಅವರು ದಿನಾಂಕ 22.02.2012ರಂದು ದೆಹಲಿ ಕರ್ನಾಟಕ ಸಂಘ ಮತ್ತು ಬೆಂಗಳೂರಿನ ಸಪ್ನಬುಕ್ ಹೌಸ್ ಆಶ್ರಯದಲ್ಲಿ ದೆಹಲಿಯ ಇಂಡಿಯಾ ಹ್ಯಾಬಿಟೆಟ್ ಸೆಂಟರ್‌ನಲ್ಲಿ ಆಯೋಜಿಸಲಾದ ಪ್ರೊ.ಕೆ.ಈ. ರಾಧಾಕೃಷ್ಣ ಅವರ ನೆಹರು ಚಿಂತನೆಗಳ ಕುರಿತ 'ಯಾರು ಭಾರತ ಮಾತೆ' ಅನುವಾದಿತ ಕೃತಿ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಅವರು ರಾಷ್ಟ್ರಗಳ ಒಕ್ಕೂಟದಲ್ಲಿ ಭಾರತವನ್ನು ಒಂದು ವಿಭಿನ್ನ ಪ್ರಜಾಪ್ರಭುತ್ವ ಎಂದು ಪರಿಗಣಿಸಲು ಹಾಗೂ ಭಾರತದ ಜೊತೆಗಿನ ಒಂದು ಪ್ರಮುಖ ದೇಶ ಎಂದು ಪರಿಗಣಿಸಲು ಮೂಲ ಕಾರಣ ಈ ದೇಶದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಎಂದರು. ಅವರು ನಮ್ಮ ದೇಶದ ಪರಂಪರೆಯ ಬಗ್ಗೆ ಹೆಮ್ಮೆಪಟ್ಟುಕೊಳ್ಳುತ್ತಿದ್ದರು ಮತ್ತು ಅದನ್ನು ಸಂಘಟಿಸುತ್ತಾ ಆಧುನಿಕ ಭಾರತಕ್ಕೆ ಅನುಗುಣವಾಗಿ ಸಮನ್ವಯಗೊಳಿಸಲು ಪ್ರಯತ್ನಿಸುತ್ತಿದ್ದರು ಎಂದು ಹೇಳಿದರು. ಹಲವು ಭಾಷೆಗಳನ್ನು ಅರಿತಿದ್ದ ನೆಹರೂ ಅವರು ಆಧುನಿಕ ಭಾರತದ ವಿಶ್ವವಿದ್ಯಾಲಯುಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಸಂಸ್ಥೆಗಳಿಗೆ ಅಸ್ತಿಭಾರ ಹಾಕಿದರು. ದುರಾದೃಷ್ಟವೆಂದರೆ ಒಂದು ವರ್ಗದ ಜನತೆಗೆ ಇತಿಹಾಸ ಓದುವ ತಾಳ್ಮೆ ಇಲ್ಲ. ಅವರು ತಮ್ಮ ಪೂರ್ವಾಗ್ರಹಗಳಿಂದ ನೆಹರು ಅವರನ್ನು ತಪ್ಪಾಗಿ ಬಿಂಬಿಸುವುದನ್ನೇ ಬಯಸುತ್ತಿದ್ದಾರೆ. ಆದರೆ ನಕಲಿ ಹಾಗೂ ಸುಳ್ಳು ಪ್ರಚೋದನೆಗಳನ್ನು ತಿರಸ್ಕರಿಸುವ ಹಾಗೂ ಎಲ್ಲವನ್ನೂ ಸರಿಯಾದ ದೃಷ್ಟಿಕೋನದಲ್ಲಿ ನೋಡಲು ಇತಿಹಾಸಕ್ಕೆ ಸಾಧ್ಯವಿದೆ ಎಂಬ ವಿಶ್ವಾಸ ನನಗಿದೆ ಎಂದು ಮನಮೋಹನ್ ಸಿಂಗ್ ಹೇಳಿದರು.

ಅವರು ನೆಹರು ಚಿಂತನೆಗಳ ಅನುವಾದಿತ ಕೃತಿಯನ್ನು ಹೊರತಂದ ಪ್ರೊ.ಕೆ.ಇ.ರಾಧಾಕೃಷ್ಣ ಅವರ ಕಾರ್ಯವನ್ನು ಶ್ಲಾಘಿಸಿದರು.

ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ದೆಹಲಿ ಕರ್ನಾಟಕ ಸಂಘ ನಡೆದು ಬಂದ ದಾರಿ ಮತ್ತು ಅದರ ಕಾರ್ಯ ಚಟುವಟಿಕೆಗಳ ವಿವರ ನೀಡಿದರು. ಅವರು ಸಂಘದ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಮತ್ತು ಹಿರಿಯ ರಾಜಕಾರಣಿ ಜೈರಾಂ ರಮೇಶ್ ಭಾಗವಹಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

ಶಿಕ್ಷಣ ತಜ್ಞ, ಕೃತಿಯ ಅನುವಾದಕ ಪ್ರೊ.ಕೆ.ಈ. ರಾಧಾಕೃಷ್ಣ, ಲೇಖಕ ಪ್ರೊ. ಪುರುಷೋತ್ತಮ ಅಗರವಾಲ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಕರ್ನಾಟಕ ಕ್ಯಾಥೋಲಿಕ್ ಫೆಡರೇಷನ್‌ನ ಅಧ್ಯಕ್ಷ ರೊನಾಲ್ಡ್ ಕೊಲಾಸೋ ಉಪಸ್ಥಿತರಿದ್ದರು.

ಮೂಲ ಇಂಗ್ಲೀಷ್ ಕೃತಿಯನ್ನು ಪ್ರೊ.ಪುರುಷೋತ್ತಮ ಅಗರವಾಲ್ ಅವರು ಸಂಪಾದಿಸಿ ಪ್ರಸ್ತಾವನೆ ಬರೆದು ಪ್ರಕಟಿಸಿದರು.

ನೆಹರೂ ಅವರ ಆಯ್ದ ಲೇಖನಗಳನ್ನು ಈ ಕೃತಿಯಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ ನೆಹರೂ ಅವರನ್ನು ಕುರಿತು ಅವರನ್ನು ಸಮೀಪದಿಂದ ಕಂಡ ಗಣ್ಯರು ಬರೆದ ಲೇಖನಗಳು ಕೃತಿಯಲ್ಲಿ ಒಳಗೊಂಡಿವೆ.

ಬೆಂಗಳೂರಿನ ಪ್ರತಿಷ್ಠಿತ ಸಪ್ನ ಬುಕ್ ಹೌಸ್ ಕನ್ನಡ ಅನುವಾದಿತ 'ಯಾರು ಭಾರತ ಮಾತೆ' ಕೃತಿಯನ್ನು ಪ್ರಕಟಿಸಿದೆ.



**ಡಾ. ಮನಮೋಹನ್ ಸಿಂಗ್ ಅವರ ವರ್ಣಚಿತ್ರವನ್ನು ಶ್ರೀಮತಿ ಭಾರತಿ ಸಿಂಗ್ ಅವರು ನೀಡಿ ಗೌರವಿಸಿದರು.**

***ಎಸ್.ಕುಮಾರ್***

# ಶಿಕ್ಷಣ ಮತ್ತು ಉದ್ಯೋಗ ರಾಷ್ಟ್ರೀಯ ನೀತಿ ವಿಚಾರ ಸಂಕಿರಣ



ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ದಿನಾಂಕ 29.02.20ರಂದು ಶಿಕ್ಷಣ ಮತ್ತು ಉದ್ಯೋಗ : ರಾಷ್ಟೀಯ ನೀತಿ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. ಭಾಗವಹಿಸಿದ ಗಣ್ಯರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು

ಅಧ್ಯಕ್ಷತೆ ವಹಿಸಿದ್ದ ಡಾ. ಎಲ್. ಹನುಮಂತಯ್ಯ ಅವರು ಮಾತನಾಡಿ, ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಸಬೇಕೆಂದರು. ಅ ಮತ್ತು ಆ ಗ್ರೂಪ್ ನೌಕರಿಯನ್ನು ಸ್ಥಳೀಯರಿಗೇ ನೀಡಬೇಕೆಂಬ ಹಕ್ಕೊತ್ತಾಯದ ಬಗ್ಗೆ ಮಾತ ನಾಡಿದರು. ಆಯಾಯಾ ರಾಜ್ಯದ ಜನರಿಗೇ ಹೆಚ್ಚು ಉದ್ಯೋಗ ನೀಡುವ ಮೂಲಕ ರಾಷ್ಟೀಯ ಉದ್ಯೋಗ ನೀತಿ ರೂಪಿಸಬೇಕೆಂದರು. ಈ ಸಂಬಂಧ 70ರ ದಶಕದ ಬ್ಯಾಂಕಿಂಗ್ ನೀತಿಯನ್ನು ಪ್ರಸ್ತಾಪಿಸಿದರು. ಆಯಾ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ಮೂಲಕ ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಬೇಕೆಂದರು. ಕುವೆಂಪು ಅವರ ವಿಶ್ವಮಾನವ ಪ್ರಜ್ಞೆ ಅಂತರ್ಗತವಾಗಿರಬೇಕೇ ವಿನಹ ಅದು ತೋರ್ಪಡಿಕೆಯಾಗಬಾರದು ಎಂದರು. ಭವ್ಯ ಭಾರತದ ಶರಣರ ರಾಜಧರ್ಮವನ್ನು ಉಲ್ಲೇಖಿಸಿದರು.

ಡಾ. ವೆಂಕಟಾಚಲ ಹೆಗಡೆಯವರು ಬೆಂಗಳೂರಿನಲ್ಲಿನ ತಮ್ಮ ವಿದ್ಯಾರ್ಥಿ ಜೀವನದ ನೆನಪುಗಳನ್ನು ಮೆಲುಕು ಹಾಕಿದರು. ಆಗಿನ ಬೆಂಗಳೂರಿನಲ್ಲಿ ಸ್ಥಳೀಯರೇ ತುಂಬಿರುತ್ತಿದ್ದ ಬಿ.ಹೆಚ್.ಇ.ಎಲ್., ಎನ್.ಜಿ.ಎಫ್., ಎಚ್.ಎ.ಎಲ್. ಕಂಪನಿಗಳಲ್ಲಿ ಕನ್ನಡದ ಸಾಕಷ್ಟು ಕಾರ್ಯಕ್ರಮಗಳು ನಡೆಯುತ್ತಿದ್ದುದನ್ನು ನೆನಪಿಸಿಕೊಂಡರು. ಈಗಿನ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸ್ಥಳೀಯರಿಗೆ ಮಾನ್ಯತೆ ನೀಡುವಂತಾಗಬೇಕು ಎಂದರು.

ರಾಷ್ಟೀಯ ಶಿಕ್ಷಣ ನೀತಿಯ ಬಗ್ಗೆ ವಿಷಯ ಮಂಡಿಸಿದ ಡಾ.ಪುರುಷೋತ್ತಮ ಬಿಳಿಮಲೆ ಅವರು ರಾಷ್ಟೀಯ ಶಿಕ್ಷಣ ನೀತಿಯ 600 ಪುಟಗಳ ಕರಡು ಪ್ರತಿಯನ್ನು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತ್ರ ಪ್ರಕಟಿಸಿರುವ ಮತ್ತು ಇದರ ಬಗ್ಗೆ ಸಾರ್ವಜನಿಕ ಪ್ರತಿಕ್ರಿಯೆ ನೀಡಲು ಕೇವಲ 40 ದಿನಗಳ ಕಾಲಾವಕಾಶ ನೀಡಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು. ಕನ್ನಡದಲ್ಲಿಯೂ ಕರಡು ಪ್ರತಿ ತಯಾರಿಸಿ ಕೊಡಲು ಕೇಳಿದ್ದರೆ, ತಾವೇ ಮಾಡಿಕೊಡುತ್ತಿದ್ದುದಾಗಿ ಹೇಳಿದರು. 2025ರ ವೇಳೆಗೆ ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಬಜೆಟ್‌ನಲ್ಲಿ ಹಣವನ್ನು ಮೀಸಲಿಟ್ಟಿಲ್ಲವೆಂದು ಹೇಳಿದರು. ಭಾರತದಲ್ಲಿ ಸುಮಾರು 19,500 ಭಾಷೆಗಳಿದ್ದು ಮತ್ತು ಅವುಗಳ 40 ವರ್ಷಗಳ ಸ್ಥಿತಿಗತಿಯ ಬಗ್ಗೆ ಮಾತನಾಡಿದರು. ಹಿಂದಿ ಪ್ರತಿಶತ 45 ರ ಬೆಳವಣಿಗೆ ಕಂಡಿದ್ದರೆ, ಕನ್ನಡ ಕೇವಲ 3.5 ರ ಬೆಳವಣಿಗೆ ಕಂಡಿರುವುದನ್ನು ಜನಗಣತಿ ಮಾಹಿತಿ ಆಧರಿಸಿ ಹೇಳಿದರು. ಕನ್ನಡ ಭಾಷೆಯ ಬೆಳವಣಿಗೆಗೆ ಒಕ್ಕೂಟಗಳು ಒಂದು ಕಾರ್ಯಸೂಚಿಯನ್ನು ಕೈಗೊಳ್ಳಬೇಕೆಂಬ ಸಂದೇಶ ನೀಡಿದರು. ಸರ್ವ ಶಿಕ್ಷಣ ನೀತಿಯನ್ನು ಉಲ್ಲೇಖಿಸಿ, ರಾಜಕಾರಣಿಗಳ ನಿರಾಸಕ್ತಿಯಿಂದಾಗಿ ಕನ್ನಡ ನಲುಗುತ್ತಿರುವುದಾಗಿ ಹೇಳಿದರು. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಮೇಲೆ ಸರ್ಕಾರದಿಂದ ಅನುದಾನವಾಗಿ ಪಡೆದ ಆರು ಕೋಟಿ ರೂ.ಗಳನ್ನೂ ಸಹ ಖರ್ಚು ಮಾಡದೇ ಇರುವುದು ಇವರ ನಿರಾಸಕ್ತಿಗೆ ನಿದರ್ಶನ ಎಂದರು. ಕನ್ನಡಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದರು. ನಮ್ಮ ನಾಡಿನ ಹೆಮ್ಮೆಯ ಸಂಸದರಾಗಿದ್ದ ದಿ.ಅನಂತ ಕುಮಾರ್ ಅವರನ್ನು ನೆನೆದರು. ನಾಡಿನ ನೆಲ, ಜಲ, ಭಾಷೆಯ ಕುರಿತ ಅವರ ಪ್ರೀತಿಯನ್ನು ಸ್ಮರಿಸಿದರು. ಸರಕಾರ ಭಾಷಾ ನೀತಿಯನ್ನು ರೂಪಿಸಬೇಕು ಮತ್ತು ರಾಷ್ಟ್ರೀಯ ಮಟ್ಟದ ಕನ್ನಡ ವೇದಿಕೆಯನ್ನು ಸೃಷ್ಟಿಸಿ, ಕನ್ನಡವನ್ನು ಅಭಿವೃದ್ಧಿಗೊಳಿಸಬೇಕು ಎಂದು ಆಶಿಸಿದರು. ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯಲ್ಲಿರಬೇಕನ್ನುವ ಹೋರಾಟಕ್ಕೆ ಬಲ ಬರಲು ಎಲ್ಲಾ ರಾಜ್ಯದ ಸಾಂಸ್ಕೃತಿಕ ಇಲಾಖೆ ಕಾರ್ಯದರ್ಶಿಗಳ ಒಂದು ಸಭೆ ಕರೆದು ನಿರ್ಣಯ ಮಂಡನೆಯನ್ನು ಮಾಡಿ ಸಂಸತ್ ಸದಸ್ಯರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಬೇಕು ಎಂದರು.

ಅಶ್ವತ್ಥ ನಾರಾಯಣ ಅವರು ಮಾತನಾಡಿ, ಈಗಿನ ಕೈಗಾರಿಕಾ ನೀತಿಯಿಂದಾಗಿ ಸ್ಥಳೀಯ ಭಾಷೆಗೆ ದಕ್ಕೆಯಾಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ತಿಮ್ಮಯ್ಯನವರು ರನ್ನ ಪಂಪರ ಸಾಹಿತ್ಯವನ್ನು ಉಲ್ಲೇಖಿಸುವ ಮೂಲಕ ಕನ್ನಡದ ಸಾಹಿತ್ಯದ ಹಿರಿಮೆಯನ್ನು ಸಾರಿದರು.

ಮಾಯಣ್ಣ ಮಾತನಾಡಿ, ಕನ್ನಡ ಭಾಷೆಯ ಉಳಿವಿಗೆ ಸರ್ಕಾರದ ಮೇಲೆ ಒತ್ತಡ ತರುವ ಕೆಲಸ ಮಾಡುವುದಾಗಿ ಹೇಳಿದರು.

ಸುಮನ್ ಅವರು ಮಾತನಾಡಿ, ಇಡೀ ಕರ್ನಾಟಕವನ್ನು ಒಂದು ಹೂ ಗುಚ್ಛಕ್ಕೆ ಹೋಲಿಸಿದರು. ಬೆಂಗಳೂರು ಒಂದು ಮಿನಿ ಇಂಡಿಯಾ ಇದ್ದಂತೆ ಹಾಗೂ ಇಲ್ಲಿ ಎಲ್ಲಾ ಭಾಷಿಗರೂ ಸೌಹಾರ್ದವಾಗಿ ಬಾಳುತ್ತಿರುವುದರ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಒಕ್ಕೂಟದ ಕಾರ್ಯದರ್ಶಿ ನಾ. ಶ್ರೀಧರ್ ಅವರು ವಿಚಾರ ಸಂಕಿರಣದ ನಿರ್ಣಯಗಳನ್ನು ಓದಿದರು. ಪ್ರಾಥಮಿಕ ಶಿಕ್ಷಣ ಮತ್ತು ಉದ್ಯೋಗ ನೇಮಕಾತಿ ಪರೀಕ್ಷೆಗಳನ್ನು ಸ್ಥಳೀಯ ಭಾಷೆಯಲ್ಲಿ ನಡೆಸಬೇಕೆಂಬ ನಿರ್ಣಯವನ್ನು ಒಕ್ಕೂಟ ಕೈಗೊಂಡಿರುವುದಾಗಿ ಹೇಳಿದರು.

ಸಿ.ಎಂ. ನಾಗರಾಜ್ ಅವರು ವಂದಿಸಿ ಗಣ್ಯರಿಗೆ ಕನ್ನಡದ ಪೇಟ ತೊಡಿಸಿ, ಶಾಲು ಹೊದಿಸಿ ಗೌರವಿಸಿದರು.

ಕೋಲಾರದ ಶ್ರೀ ಜಯಾ ನೃತ್ಯ ಕಲಾ ಅಕಾಡೆಮಿಯ ಮಹಿಳಾ ತಂಡದಿಂದ ಕೋಲಾರ ರಮೇಶ್ ಅವರ ನಿರ್ದೇಶನದಲ್ಲಿ ನೃತ್ಯ ರೂಪಕ ಅತ್ಯಂತ ಮನೋಜ್ಞವಾಗಿ ಮೂಡಿಬಂತು. ರಾಷ್ಟ್ರ ಕವಿ ಕುವೆಂಪು ವಿರಚಿತ ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ರಾಮಾಯಣ ದರ್ಶನಂ ಇದನ್ನು ಒಂದು ಗಂಟೆಯ ನೃತ್ಯ ರೂಪಕಕ್ಕೆ ತಂದು, ಪ್ರಸ್ತುತಪಡಿಸಿದ ಬಗೆ ಶ್ಲಾಘನೀಯ. ಪಾತ್ರಧಾರಿಗಳು ಅಚ್ಚುಕಟ್ಟಾದ ಅಭಿನಯ ಮತ್ತು ನೃತ್ಯದ ಮೂಲಕ ಮೆರುಗು ನೀಡಿದರು. ಪುಟಾಣಿ ಲವ-ಕುಶರ ರಾಮ ಭಜನೆಯಿಂದ ಪ್ರಾರಂಭವಾಗುವ ರೂಪಕದಲ್ಲಿ ಮುಕ್ತಾಯದವರೆಗೂ ಆಗಾಗ ಬಂದು ಹೋಗುವ ಪುಟಾಣಿ ಪಾತ್ರಧಾರಿಗಳ ಪ್ರದರ್ಶನಕ್ಕೆ ಪ್ರೇಕ್ಷಕರು ಚಪ್ಪಾಳೆ ಮೂಲಕ ಹುರಿದುಂಬಿಸಿ ಖುಷಿಪಟ್ಟರು.



'ಶ್ರೀ ರಾಮಾಯಣ ದರ್ಶನಂ' ನೃತ್ಯ ರೂಪಕ

-ಕೆ.ಸಿ. ರತ್ನಶ್ರೀ ಶ್ರೀಧರ್

# ಯಶಸ್ವಿಯಾಗಿ ನಡೆದ ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘದ 2019–20ನೇ ಸಾಲಿನ ವಾರ್ಷಿಕ ಕ್ರೀಡೋತ್ಸವ ಅಂಗವಾಗಿ ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿಗಳು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ದಿನಾಂಕ 19.02.2020ರಂದು ನಡೆಯಿತು. ಕಬಡ್ಡಿ ಪಂದ್ಯಾವಳಿಯಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್–ಬಿ, ಬೆಳ್ಳಿಯಪ್ಪಾಸ್ ಗ್ರೂಪ್–ಎ, ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2, ದೆಹಲಿ ತುಳುಸಿರಿ, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ರೈಸಿಂಗ್ ರಾಯಲ್ಸ್ ಗುರ್‌ಗಾಂವ್–1, ಕೆ.ಬಿ.ಎಲ್. ರೈಡರ್ಸ್ ಹಾಗೂ ವಾಲಿಬಾಲ್ ಪಂದ್ಯಾವಳಿಯಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್–ಬಿ, ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2, ನಾಡಪ್ರಭು ಕೆಂಪೇಗೌಡ ಫೌಂಡೇಶನ್, ಕೆ.ಬಿ.ಎಲ್. ರೈಡರ್ಸ್, ರೈಸಿಂಗ್ ರಾಯಲ್ಸ್ ಗುರ್‌ಗಾಂವ್–1, ಬೆಳ್ಳಿಯಪ್ಪಾಸ್ ಗ್ರೂಪ್–ಎ, ದೆಹಲಿ ತುಳುಸಿರಿ ತಲಾ 7 ತಂಡಗಳು ಭಾಗವಹಿಸಿದ್ದವು.

ಮೊದಲ ವಾಲಿಬಾಲ್ ಪಂದ್ಯವು ಬೆಳ್ಳಿಯಪ್ಪಾಸ್ ಗ್ರೂಪ್–ಬಿ ಮತ್ತು ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2 ತಂಡಗಳ ನಡುವೆ ನಡೆಯಿತು. ಪಂದ್ಯದಲ್ಲಿ ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2 ತಂಡವು ಜಯಿಸಿತು. ಎರಡನೇ ಪಂದ್ಯವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಕೆ.ಬಿ.ಎಲ್ ರೈಡರ್ಸ್ ತಂಡಗಳ ನಡುವೆ ನಡೆದ ಪಂದ್ಯದಲ್ಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡವು ಜಯ ಸಾಧಿಸಿತು. ಮೂರನೇ ಪಂದ್ಯವು ರೈಸಿಂಗ್ ರಾಯಲ್ಸ್ ಗುರ್‌ಗಾಂವ್–1 ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್–ಎ ತಂಡಗಳ ನಡುವೆ ನಡೆದು ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್–ಎ ತಂಡವು ಜಯ ಸಾಧಿಸಿತು.

ಮೊದಲ ಸೆಮಿಫೈನಲ್ ಪಂದ್ಯಾಟವು ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2 ಮತ್ತು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡಗಳ ನಡುವೆ ನಡೆದು ಪಂದ್ಯದಲ್ಲಿ ರೈಸಿಂಗ್ ರಾಯಲ್ಸ್ ಗುರ್‌ಗಾಂವ್–2 ತಂಡವು ಫೈನಲ್ ಪ್ರವೇಶಿಸಿತು. ಎರಡನೇ ಸೆಮಿಫೈನಲ್ ಪಂದ್ಯವು ಬೆಳ್ಳಿಯಪ್ಪಾಸ್ ಗ್ರೂಪ್–ಎ ಮತ್ತು ದೆಹಲಿ ತುಳು ಸಿರಿ ತಂಡಗಳ ನಡುವೆ ನಡೆಯಿತು. ಇದರಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್–ಎ ತಂಡವು ಜಯ ಸಾಧಿಸಿ ಫೈನಲ್ ಪ್ರವೇಶಿಸಿತು.



**ಬೆಳ್ಳಿಯಪ್ಪಾಸ್ ಗ್ರೂಪ್–ಎ ತಂಡ ವಾಲಿಬಾಲ್ ವಿನ್ನರ್**



**ಗುರ್‌ಗಾಂವ್–2 ತಂಡ ವಾಲಿಬಾಲ್ ರನ್ನರ್ ಅಪ್**



ಗುರ್‌ಗಾಂವ್-2 ತಂಡ ಕಬಡ್ಡಿ ವಿನ್ನರ್



ಕೆ.ಬಿ.ಎಲ್. ರೈಡರ್ಸ್ ತಂಡ ಕಬಡ್ಡಿ ರನ್ನರ್ ಅಪ್

ಫೈನಲ್ ಪಂದ್ಯಾಟವು ಬೆಳ್ಳಿಯಪ್ಪಾಸ್ ಗ್ರೂಪ್-ಎ ಮತ್ತು ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ತಂಡಗಳ ನಡುವೆ ನಡೆಯಿತು. ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ಜಯ ಗಳಿಸಿತು ಗುರ್‌ಗಾಂವ್-2 ತಂಡವು ರನ್ನರ್ ಅಪ್ ಸ್ಥಾನವನ್ನು ಪಡೆಯಿತು.

ಕಬಡ್ಡಿ ಮೊದಲ ಪಂದ್ಯವು ಬೆಳ್ಳಿಯಪ್ಪಾಸ್ ಗ್ರೂಪ್-ಬಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡಗಳ ನಡುವೆ ನಡೆದು ಪಂದ್ಯದಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್-ಬಿ ತಂಡವು ಜಯ ಸಾಧಿಸಿತು. ಎರಡನೇ ಪಂದ್ಯವು ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ಮತ್ತು ದೆಹಲಿ ತುಳು ಸಿರಿ ತಂಡದ ಜೊತೆಗೆ ನಡೆಯಬೇಕಾದ ಪಂದ್ಯ ದೆಹಲಿ ತುಳು ಸಿರಿಯ ವಾಕ್ ಓವರ್ ನಿಂದಾಗಿ ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ತಂಡವು ಸಮಿಫೈನಲ್ ತುಲುಪಿತು. ಮೂರನೇ ಪಂದ್ಯವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ರೈಸಿಂಗ್ ರಾಯಲ್ಸ್ ಗುರ್‌ಗಾಂವ್-1 ತಂಡಗಳ ನಡುವೆ ನಡೆದ ಪಂದ್ಯದಲ್ಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಜಯ ಗಳಿಸಿತು.

ಮೊದಲ ಸೆಮಿಫೈನಲ್ ಪಂದ್ಯವು ಬೆಳ್ಳಿಯಪ್ಪಾಸ್ ಗ್ರೂಪ್-ಬಿ ಮತ್ತು ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ತಂಡಗಳ ನಡುವೆ ನಡೆಯಿತು. ಪಂದ್ಯದಲ್ಲಿ ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ತಂಡವು ಫೈನಲ್ ಪ್ರವೇಶಿಸಿತು. ಎರಡನೇ ಸೆಮಿಫೈನಲ್ ಪಂದ್ಯವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಕೆ.ಬಿ.ಎಲ್. ರೈಡರ್ಸ್ ತಂಡಗಳ ನಡುವೆ ನಡೆದು ಪಂದ್ಯದಲ್ಲಿ ಕೆ.ಬಿ.ಎಲ್. ರೈಡರ್ಸ್ ಜಯಗಳಿಸಿ ಪ್ರವೇಶಿಸಿತು.

ಕಬಡ್ಡಿ ಫೈನಲ್ ಪಂದ್ಯಾಟವು ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ಮತ್ತು ಕೆ.ಬಿ.ಎಲ್. ರೈಡರ್ಸ್ ತಂಡಗಳ ನಡುವೆ ನಡೆಯಿತು. ರೈಸಿಂಗ್ ರಾಯಲ್ಸ್ ಗುರ್‌ಗಾಂವ್-2 ತಂಡವು ಗಳಿಸಿತು. ಕೆ.ಬಿ.ಎಲ್. ರೈಡರ್ಸ್ ರನ್ನರ್ ಅಪ್ ಸ್ಥಾನವನ್ನು ಪಡೆಯಿತು.

ಪಂದ್ಯಾವಳಿಯನ್ನು ಕ್ರೀಡಾ ಸಮಿತಿಯ ಸಂಚಾಲಕ ಸಂತೋಷ ಜೆ. ಅವರು ನಡೆಸಿಕೊಟ್ಟರು. ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯ ಶಿವಪ್ಪ ಎಂ. ಉಪಸ್ಥಿತರಿದ್ದರು. ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ದೈಹಿಕ ಶಿಕ್ಷಕರಾದ ಶಿವರಾಮ್ ಅವರು ಪಂದ್ಯಾವಳಿ ಯಶಸ್ವಿಯಾಗುವಲ್ಲಿ ಸಹಕರಿಸಿದರು. ಸಂಚಾಲಕ ಸಂತೋಷ ಜೆ. ಅವರು ಕಬಡ್ಡಿ ಮತ್ತು ವಾಲಿಬಾಲ್ ಪಂದ್ಯಾವಳಿಯನ್ನು ಸ್ನೇಹ ಬಾಂಧವ್ಯದಿಂದ ಆಡಿದ ಆಟಗಾರರಿಗೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಆಟಗಾರರನ್ನು ಪ್ರೋತ್ಸಾಹಿಸಿದ ದೆಹಲಿ ಕನ್ನಡಿಗರಿಗೆ ಹಾಗೂ ಸಂಘದ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಂಡಗಳು ಭಾಗವಹಿಸಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

*ಸಂತೋಷ ಜೆ.*
*ಸಂಚಾಲಕರು ಕ್ರೀಡಾ ಸಮಿತಿ*

# ಮಾತೃಭಾಷಾ ದಿನಾಚರಣೆ ಅಂಗವಾಗಿ ಭಾಷಾ ಬಾಂಧವ್ಯ



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 21.02.20ರಂದು ಅಂತರಾಷ್ಟ್ರೀಯ ಮಾತೃ ಭಾಷಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಭಾಷಾ ಬಾಂಧವ್ಯ ವಿಷಯದ ಕುರಿತು ಮಾತನಾಡಿದ ಬೆಂಗಳೂರಿನ ಚಿಂತಕ, ಕವಿ, ಶಿಕ್ಷಣ ತಜ್ಞ ಪ್ರೊ.ಕೆ.ಇ.ರಾಧಾಕೃಷ್ಣ ಅವರು ಪ್ರತಿ ಭಾಷೆಯ ಹಿಂದೆ ವಿಶಿಷ್ಟ ಬಗೆಯ ಸಂಸ್ಕೃತಿ ಇರುತ್ತದೆ, ಸಂಸ್ಕೃತಿಯ ಪೋಷಣೆಗೆ ಆಯಾ ಭಾಷೆಗಳನ್ನು ಉಳಿಸಿ ಪ್ರೋತ್ಸಾಹ ನೀಡುವ ವಾತಾವರಣ ನಿರ್ಮಾಣವಾಗಬೇಕು ಎಂದು ಆಶಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತ ಸರಕಾರ ಗೃಹ ಮಂತ್ರಾಲಯದ ಸಹಾಯಕ ರಿಜಿಸ್ಟ್ರಾರ್ ಜನರಲ್, ಡಾ. ಹೇಮಾನಂದ ಬಿ.ಪಿ. ಅವರು ಮಾತನಾಡಿ ಭಾಷೆಗೆ ಅಳಿವಿದೆ ಎಂಬ ಆತಂಕ ಬೇಡ. ವ್ಯವಾಹಾರಿಕವಾಗಿ ಇತರ ಭಾಷೆಗಳನ್ನು ಬಳಸಿದರೂ ನಮ್ಮ ಮಾತೃ ಭಾಷೆಯನ್ನು ನಾವು ಮರೆಯಬಾರದು ಎಂದು ತಿಳಿಸಿದರು.

ಸಾ-ಮುದ್ರ ಫೌಂಡೇಶನ್ನಿನ ಮುಖ್ಯಸ್ಥೆ ಭಾರತಿ ಸಿಂಗ್, ಶಿಕ್ಷಣ ತಜ್ಞೆ ಪ್ರೊ.ಮೈಥಿಲಿ, ಸಖಾರಾಮ ಉಪ್ಪೂರು ಮತ್ತು ರಾಧಾಪ್ರಭು ಅವರು ಮಾತೃಭಾಷೆಯ ಕುರಿತು ಮಾತನಾಡಿದರು.

ಅರೆಭಾಷೆ ಕುರಿತು ಶ್ರೀಮತಿ ಸರೋಜ ಮಾಧವ, ಮರಾಠಿ ಭಾಷೆ ಕುರಿತು ಶ್ರೀಮತಿ ಸುನಿತಾ ನಾಯಕ್, ಹವ್ಯಕ ಭಾಷೆಯ ಕುರಿತು ಸರವು ಕೃಷ್ಣಭಟ್, ಚಿತ್ಪಾವನಿ ಭಾಷೆ ಕುರಿತು ಶ್ರೀಮತಿ ಪವಿತ್ರ ತಮಣ್ಕರ್ ಮತ್ತು ತುಳು ಭಾಷೆ ಕುರಿತು ಉಪಾಧ್ಯಕ್ಷ ಡಾ.ಅವನೀಂದ್ರನಾಥ್ ರಾವ್ ವಿಚಾರ ಮಂಡಿಸಿದರು. ಆರಂಭದಲ್ಲಿ ಎನ್.ಪಿ.ಚಂದ್ರಶೇಖರ್ ಅವರು ಮಾತೃ ಭಾಷಾ ದಿನಾಚರಣೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಸಂಘದ ಬೆಳವಣಿಗೆಗೆ ಕರ್ನಾಟಕದ ವಿವಿಧ ಮಾತೃ ಭಾಷೆಗಳ ಹಿನ್ನೆಲೆಯಿಂದ ಬಂದ ಕನ್ನಡಿಗರು ಸೇವೆ ಸಲ್ಲಿಸಿದ್ದಾರೆ ಎನ್ನುವುದನ್ನು ಸ್ಮರಿಸಿಕೊಂಡರು. ಪ್ರಧಾನ ಕಾರ್ಯದರ್ಶಿ ಸಿ.ಎಂ ನಾಗರಾಜ ವಂದಿಸಿದರು.

## ಪ್ರೊ. ಷ. ಶೆಟ್ಟರ್ ಅವರಿಗೆ ಅಂತಿಮ ನಮನಗಳು:



ಖ್ಯಾತ ಇತಿಹಾಸ ತಜ್ಞ ಮತ್ತು ಸಂಶೋಧಕ ಪ್ರೊ.ಷ. ಶೆಟ್ಟರ್ (85) ಅವರು ದಿನಾಂಕ 28.02.20ರಂದು ನಿಧನರಾಗಿದ್ದಾರೆ.

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಸಂಶೋಧಕರು ಮತ್ತು ವಿದ್ವಾಂಸರಾಗಿದ್ದ ಪ್ರೊ.ಷ.ಶೆಟ್ಟರ್ ಅವರು ದೆಹಲಿ ಕರ್ನಾಟಕ ಸಂಘ ಅಯೋಜಿಸಿದ ಹಲವಾರು ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ರೊ.ಶೆಟ್ಟರ್ ಅವರು ಕಳೆದ ವರ್ಷ ರಾಷ್ಟ್ರಪ್ರಶಸ್ತಿ ಪಡೆದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಅವರನ್ನು ಅಭಿನಂದಿಸಿದ ಸ್ಮರಣೀಯ ಕ್ಷಣಗಳು ಈಗಲೂ ಹಸಿರಾಗಿವೆ.

ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘ ಪ್ರೊ.ಷ.ಶೆಟ್ಟರ್ ಅವರಿಗೆ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಕನ್ನಡಕ್ಕೆ ಅಂತಾರಾಷ್ಟ್ರೀಯ ಮಹತ್ವವನ್ನು ತಂದುಕೊಟ್ಟ ವಿದ್ವಾಂಸ

ಕರ್ನಾಟಕದ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತಾದ ಸಂಶೋಧನೆಗಳಿಗೆ ಅಂತಾರಾಷ್ಟ್ರೀಯ ಮಹತ್ವವನ್ನು ತಂದಿತ್ತವರು ಇಬ್ಬರು, ಒಬ್ಬರು ಎ ಕೆ ರಾಮಾನುಜನ್, ಇನ್ನೊಬ್ಬರು ಪ್ರೊ. ಷ. ಶೆಟ್ಟರ್.

ಶಿಕಾಗೋ, ಕ್ಯಾಲಿಫೋರ್ನಿಯಾ, ಆಸ್ಟಿನ್, ಕೇಂಬ್ರಿಜ್, ಹಾರ್ವರ್ಡ್, ಹೈಡಲ್ ಬರ್ಗ್, ಅಥೆನ್ಸ್, ಲೈಡನ್, ಮಾಸ್ಕೋ, ಜೆ ಎನ್ ಯು, ದೆಹಲಿ ವಿವಿ, ಮೊದಲಾದ ವಿಶ್ವವಿದ್ಯಾನಿಲಯಗಳಲ್ಲಿ ಶೆಟ್ಟರ್ ಬರೆಹಗಳನ್ನು ಗಂಭೀರವಾಗಿ ಅಭ್ಯಸಿಸುವ ವಿದ್ಯಾರ್ಥಿಗಳಿದ್ದಾರೆ. ದೇಶ-ವಿದೇಶಗಳ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಶೆಟ್ಟರ್ ಅವರ Sravana Belagola, Inviting Death, Pursuing Death, Hampi, Hoysala temples ಮೊದಲಾದ ಪುಸ್ತಕಗಳಿಗೆ ಬಹುಬೇಡಿಕೆಯಿದೆ. ಶೆಟ್ಟರ್ ನಿಧನದೊಂದಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಈಗೊಂದು ನಿರ್ವಾತ ಸೃಷ್ಟಿಯಾಗಿದೆ.

ಇತಿಹಾಸ, ಪ್ರಾಕ್ತನಶಾಸ್ತ್ರ, ಮಾನವಶಾಸ್ತ್ರ, ಕಲಾ ಇತಿಹಾಸ, ಶಾಸನ, ದರ್ಶನಶಾಸ್ತ್ರ ಮತ್ತು ಹಳೆಗನ್ನಡ ಸಾಹಿತ್ಯದ ಕುರಿತು ಪ್ರೊ.ಶೆಟ್ಟರ್ ಅವರು ಬರೆದ ಸುಮಾರು 30ಕ್ಕೂ ಹೆಚ್ಚು ಸಂಶೋಧನಾ ಗ್ರಂಥಗಳು ಮುಂದಿನ ಅನೇಕ ತಲೆಮಾರಿನ ವಿದ್ವಾಂಸರಿಗೆ ಮಾರ್ಗದರ್ಶನ ಮಾಡಲಿವೆ.

ಸ್ವಲ್ಪ ತಡವಾಗಿ ಕನ್ನಡದಲ್ಲಿ ಬರೆಯಲು ಆರಂಭಿಸಿದ ಅವರು ತಮ್ಮ ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಹಳಗನ್ನಡ– ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ , ಹಳಗನ್ನಡ ಭಾಷೆ, ಭಾಷಾ ಬೆಳವಣಿಗೆ ಮತ್ತು ಭಾಷಾ ಬಾಂಧವ್ಯ, ಪ್ರಾಕೃತ ಜಗದ್ವಲಯ ಮೊದಲಾದ ಕೃತಿಗಳ ಮೂಲಕ ಕಳೆಗುಂದುತ್ತಿದ್ದ ಕನ್ನಡ ಸಂಶೋಧನೆಗೆ ನವ ಚೈತನ್ಯ ನೀಡಿದರು. ಕಳೆದ ನಾಲ್ಕಾರು ವರ್ಷಗಳಿಂದ ಅವರು ತೊಡಗಿಸಿಕೊಂಡಿದ್ದ ಶಾಸನಾಧರಿತ ಯೋಜನೆಗಳನ್ನು ಈಗ ಯಾರು ಮುಗಿಸಿಕೊಡುವರೋ ತಿಳಿದಿಲ್ಲ.

ಜೆ ಎನ್ ಯು ಕನ್ನಡ ಅಧ್ಯಯನ ಪೀಠಕ್ಕೆ ನನ್ನನ್ನು ಆಯ್ಕೆ ಮಾಡಿದ ವಿದ್ವತ್ ಮಂಡಳಿಯಲ್ಲಿ ಪ್ರೊ. ಶೆಟ್ಟರೂ ಇದ್ದರು. ಮುಂದೆ ಅವರೇ ಪೀಠದ ಉದ್ಘಾಟನೆಯನ್ನು ಮಾಡಿದ್ದಲ್ಲದೆ, ಆನಂತರದ ದಿನಗಳಲ್ಲಿ ಪೀಠಕ್ಕೆ ಮಾರ್ಗದರ್ಶನ ಮಾಡುತ್ತಲೇ ಬಂದಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕ ಬಡವಾಯಿತು. ಅವರ ನಿಧನದ ಕೊರತೆಯನ್ನು ತುಂಬಿಕೊಳ್ಳಬೇಕಾದರೆ, ನಾವು ಬಹಳ ಕಾಲ ಕಾಯಬೇಕು.

**ಡಾ.ಪುರುಷೋತ್ತಮ ಬಿಳಿಮಲೆ**

# 'ಕಾರ್ತವೀರ್ಯಾರ್ಜುನ ಕಾಳಗ' ಯಕ್ಷಗಾನ ಪ್ರದರ್ಶನ

ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಲದ ಆಶ್ರಯದಲ್ಲಿ ದಿನಾಂಕ ೦೮.೦೨.೨೦೨೦ರಂದು ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳ, ಕೆರೆಮನೆ (ರಿ) ತಂಡದ ಕಲಾವಿದರಿಂದ 'ಕಾರ್ತವೀರ್ಯಾರ್ಜುನ ಕಾಳಗ' ಯಕ್ಷಗಾನ ಪ್ರದರ್ಶನಗೊಂಡಿತು.



ಹಿಮ್ಮೇಳದಲ್ಲಿ ಅನಂತ ಹೆಗಡೆ ದಂತಳಿಗೆ ಭಾಗವತಿಕೆ, ಶ್ರೀ ಕೃಷ್ಣ ಯಾಜಿ ಇಡಗುಂಜಿ ಚೆಂಡೆ ಶರತ್ ಹೆಗಡೆ ಮದ್ದಲೆಯಲ್ಲಿ ಸಹಕರಿಸಿದರು.

ಮುಮ್ಮೇಳದಲ್ಲಿ ಕೆರೆಮನೆ ಶಿವಾನಂದ ಹೆಗಡೆ, ಈಶ್ವರ, ಭಟ್ಟ ಹಂಸಳ್ಳಿ, ಸದಾಶಿವ ಭಟ್ಟ ಯಲ್ಲಾಪುರ, ವಿಘ್ನೇಶ್ವರ ಹಾವಗೋಡಿ, ಸೀತಾರಾಮ ಹೆಗಡೆ ಮುಡಾರೆ, ಚಂದ್ರಶೇಖರ ಎನ್., ಕೆರೆಮನೆ ಶ್ರೀಧರ ಹೆಗಡೆ, ಮಹಾವೀರ ಜೈನ್, ನಕುಲ ಗೌಡ, ಧನಂಜಯ ಗೌಡ, ಗಣಪತಿ ಕುಣಬಿ, ಕೃಷ್ಣ ಮರಾಠಿ ಕಲಾವಿದರಾಗಿ ರಂಜಿಸಿದರು.



ರಾಜ್ಯಸಭಾ ಸಚಿವಾಲಯದಲ್ಲಿ ಸೇವೆಯಲ್ಲಿರುವ ಐ.ಆರ್.ಎಸ್. ಅಧಿಕಾರಿ ಗಣಪತಿ ಭಟ್ ಅವರು ಯಕ್ಷಗಾನ ಪ್ರದರ್ಶನದ ನಂತರ ಕಲಾವಿದರನ್ನು ಅಭಿನಂದಿಸಿದರು.

# ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಅವರಿಗೆ ದೆಹಲಿ ಶಿಕ್ಷಣ ಇಲಾಖೆಯಿಂದ ಪ್ರಶಸ್ತಿ



ಇತ್ತೀಚೆಗೆ ಸೈಂಟ್ ಥೋಮಸ್ ಸ್ಕೂಲ್, ಮಂದಿರ್ ಮಾರ್ಗ್, ನವದೆಹಲಿ ಇಲ್ಲಿ ನಡೆದ ೨೦೧೯-೨೦ರ ಸಾಲಿನ ವಾರ್ಷಿಕ ಬಹುಮಾನ ವಿತರಣಾ ಸಮಾರಂಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸುಮಾರು ಎಂಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕಲಾ ಶಿಕ್ಷಕಿ ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಅವರ ಕಲಾ ಸೇವೆಯನ್ನು ಗುರುತಿಸಿ ದೆಹಲಿ ಶಿಕ್ಷಣ ಇಲಾಖೆ, ವಲಯ-೨೬ 'ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ' ನೀಡಿ ಗೌರವಿಸಿತು. ಶ್ರೀಮತಿ ಜ್ಯೋತಿ ಪೊದ್ದಾರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.

# ಸ್ನೇಹಾ ಅಸೋಸಿಯೇಶನ್‌ನಿಂದ ವನವಿಹಾರ

ದೆಹಲಿಯಲ್ಲಿ ಚಳಿಗಾಲದಲ್ಲಿ ಎಲ್ಲಾ ಉದ್ಯಾನವನಗಳು ಬಣ್ಣ ಬಣ್ಣದ ಹೂಗಳಿಂದ ನಳನಳಿಸುತ್ತದೆ. ಎಲ್ಲಿ ನೋಡಿದರಲ್ಲಿ ಹೂಗಳು ಅರಳಿ ಒಂದಕ್ಕಿಂತ ಒಂದು ಸುಂದರವಾಗಿ ಕಾಣಿಸುತ್ತದೆ. ಉದ್ಯಾನವನಗಳು ಜನರಿಂದ ತುಂಬಿ ತುಳುಕಾಡುತ್ತಿರುತ್ತದೆ. ಅದರಲ್ಲಿ ಲೋಧಿ ಗಾರ್ಡನ್ ಕೂಡಾ ಒಂದು.

ಅಂತಹ ಒಂದು ದಿನ, ದಿನಾಂಕ 11.02.2020ರಂದು ಸ್ನೇಹ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ರವರು 'ಲೋಧಿ ಗಾರ್ಡನ್'ನಲ್ಲಿ ವನವಿಹಾರವನ್ನು ಆಯೋಜಿಸಿದ್ದರು. ಸದಸ್ಯೆಯರೆಲ್ಲಾ ಮಾಗಿಯ ಚಳಿಯ ಎಳೆ ಬಿಸಿಲನ್ನು ಆನಂದಿಸಿದರು.

ಎಲ್ಲಾ ಸದಸ್ಯೆಯರು ಬೆಳಗ್ಗೆ ಗಾರ್ಡನ್‌ನಲ್ಲಿ ಸೇರಿದರು. ಸದಸ್ಯೆಯರು ಕಾಫಿ, ಚಹಾ ಹಾಗೂ ಕುರುಕಲು ತಿಂಡಿ ಸವಿದರು. ಹಳೆಯ ದಿನಗಳನ್ನು ಮೆಲಕು ಹಾಕಿದರು. ಹಿರಿಯ ಸದಸ್ಯೆ ಶ್ರೀಮತಿ ಸುಮಿತ್ರಾ ರಾವ್, ಡಾ. ಅಹಲ್ಯಾಚಿಂತಾಮಣಿ, ಶ್ರೀಮತಿ ಪ್ರಫುಲ್ಲಾ ಶೆಟ್ಟಿ, ಶ್ರೀಮತಿ ಮಾಲತಿ ರಾವ್, ಶ್ರೀಮತಿ ನಯನ ಶೆಟ್ಟಿ ಹಾಗೂ ಕಿರಿಯ ಸದಸ್ಯೆಯರೆಲ್ಲಾ ಉಪಸ್ಥಿತರಿದ್ದರು.

ಅಧ್ಯಕ್ಷೆ ಶ್ರೀಮತಿ ರಂಗಮಣಿಯವರು ಸದಸ್ಯೆ ಯರನ್ನು ಸ್ವಾಗತಿಸಿದರು ಮತ್ತು ನೂತನ ಹಾಗೂ




ವಿಶಿಷ್ಟ ಆಟಗಳನ್ನು ಆಡಿಸಿದರು. 'ವ್ಯಾಲೈಂಟನ್ಸ್ ಡೇ'ಗೆ ಸಂಬಂಧಿಸಿದಂತಹ ಆಟವನ್ನೂ ಕೂಡ ಆಡಿಸಿದರು. ಶ್ರೀಮತಿ ಲೀಲಾವತಿಯವರು ಸ್ವಲ್ಪ ವ್ಯಾಯಾಮವಾಗಲೆಂದು ಎಲ್ಲರೂ ಉತ್ಸಾಹದಿಂದ ಪಾಲ್ಗೊಳ್ಳುವಂತಹ ಎಳೆ ಬಿಸಿಲಿನಲ್ಲಿ ಆನಂದಿಸುವಂತಹ ಆಟ ಆಡಿಸಿದರು.

ಭೋಜನದ ನಂತರ ಕಾರ್ಯದರ್ಶಿ ಶ್ರೀಮತಿ ರಾಜೇಶ್ವರಿ ಕಲ್ಲೂರು ಅವರು ಕಳೆದ ಎರಡು ವರ್ಷಗಳಿಂದ ಸ್ನೇಹಾ ಅಸೋಸಿಯೇಶನ್ ನಡೆಸಿದ ಚಟುವಟಿಕೆಗಳ ಬಗ್ಗೆ ಸಂಪೂರ್ಣ ವರದಿಯನ್ನು ಓದಿದರು. ಆಟದಲ್ಲಿ ಗೆದ್ದವರಿಗೆ ಶ್ರೀಮತಿ ವಿಲಾಸಿನಿ, ಶ್ರೀಮತಿ ಶೋಭ, ಶ್ರೀಮತಿ ಕುಮಾರಿ, ಶ್ರೀಮತಿ ಪ್ರತಿಭಾ ಮತ್ತು ಶ್ರೀಮತಿ ದೀನಾರವರಿಗೆ ಅಧ್ಯಕ್ಷರು ಬಹುಮಾನ ವಿತರಿಸಿದರು.

*ಲೀಲಾವತಿ ಗುರುಪ್ರಸಾದ್*

# ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿನಿಯರ ಸಾಧನೆ



**ದಿವ್ಯಾಂಗಿ ಬೆಹೆರಾ**

ಎನ್.ಸಿ.ಸಿ. ದೆಹಲಿಯ ನಿರ್ದೇಶನಾಲಯದಿಂದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ದಿವ್ಯಾಂಗಿ ಬೆಹೆರಾ 71ನೇ ಗಣರಾಜ್ಯೋತ್ಸವ 2020 ಶಿಬಿರಕ್ಕೆ ಆಯ್ಕೆಯಾಗಿ, ಶಿಬಿರದಲ್ಲಿ ನಡೆದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ತೃತೀಯ ಬಹುಮಾನವನ್ನು ಪಡೆದಿರುತ್ತಾಳೆ.

ಎನ್.ಸಿ.ಸಿ ಯ ಎ.ಎನ್.ಓ ಹಾಗೂ ದೈಹಿಕ ಶಿಕ್ಷಣ ಶಿಕ್ಷಕಿ ಜೆಸಿಕಾ ಫೆರ್ನಾಂಡಿಸ್ ಅವರ ಮಾರ್ಗದರ್ಶನ ಪಡೆದ ವಿದ್ಯಾರ್ಥಿನಿಯ ಈ ಸಾಧನೆಗಾಗಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ಅಭಿನಂದಿಸಿದೆ.

*ಅರವಿಂದ ಬಿಜ್ಜೈ*



**ತಾನಿಯಾ ಗೋಯಲ್**

ಇತ್ತೀಚೆಗೆ ಭಾರತ ಸರಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಧಿಕೃತ ಸಂಸ್ಥೆಯಾದ ತೈಲ ಸಂರಕ್ಷಣ ಅನುಸಂಧಾನ ಸಂಘ (PCRA) ಶಾಲಾ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಿತ್ತು.

ತೈಲ ಸಂರಕ್ಷಣೆ ಕುರಿತಾದ ಸಂಸ್ಕೃತ ಪ್ರಬಂಧ ಲೇಖನ ಸ್ಪರ್ಧೆಯಲ್ಲಿ ದೆಹಲಿ ಕನ್ನಡ ಶಾಲೆಯ ಸಂಸ್ಕೃತ ಪ್ರಾಧ್ಯಾಪಕರಾದ ಗಣೇಶ ಹೆಗಡೆಯವರ ಮಾರ್ಗದರ್ಶನದಲ್ಲಿ ಹತ್ತನೇ ತರಗತಿಯ ವಿದ್ಯಾರ್ಥಿನಿ ಕುಮಾರಿ ತಾನಿಯಾ ಗೋಯಲ್ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನ ಪಡೆದು 60,000 ರೂಪಾಯಿ ಮೌಲ್ಯದ ಲ್ಯಾಪ್ ಟಾಪ್, 20,000/- ರೂಪಾಯಿಗಳ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರಗಳನ್ನು ಬಹುಮಾನವಾಗಿ ಪಡೆದು ರಾಷ್ಟ್ರಮಟ್ಟದಲ್ಲಿ ಕನ್ನಡ ಶಾಲೆಯ ಕೀರ್ತಿಪತಾಕೆಯನ್ನು ಹಾರಿಸಿದ್ದಾಳೆ.

ಈ ಹಿಂದೆ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ 21000 ರೂಪಾಯಿ ಮೌಲ್ಯದ ಸ್ಯಾಮಸಂಗ್ ಟ್ಯಾಬ್ ಮತ್ತು ಪ್ರಮಾಣಪತ್ರವನ್ನು ತನ್ನದಾಗಿಸಿಕೊಂಡಿದ್ದಳು. ಸಂಸ್ಕೃತ ಶಿಕ್ಷಕ ಗಣೇಶ ಹೆಗಡೆಯವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿಯೂ ಮಾರ್ಗದರ್ಶನ ಮಾಡಿದ್ದರು.

ವಿದ್ಯಾರ್ಥಿನಿಯ ಸಾಧನೆಗೆ ಪ್ರಾಂಶುಪಾಲರು ಮತ್ತು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

*ಗಣೇಶ ಹೆಗಡೆ*

# ಗುರುಗಾಂವ್ ಕನ್ನಡ ಸಂಘದಿಂದ ವಾರ್ಷಿಕ ಕ್ರೀಡೋತ್ಸವ

ಗುರುಗಾಂವ್ ಕನ್ನಡ ಸಂಘದಿಂದ ದಿನಾಂಕ 02.02.2020ರಂದು ಗುರುಗಾಂವ್‌ನ ಲೋಟಸ್ ಗಾರ್ಡನ್‌ನಲ್ಲಿ ಕ್ರೀಡೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಆಟೋಟ ಸ್ಪರ್ಧೆಗೆ ಆದ್ಯಕ್ಷ ಸಾಯಿ ಪ್ರಸಾದ್ ಹಿರಾಂಜಲ್, ಕಾರ್ಯದರ್ಶಿ ಕೃಷ್ಣಪ್ಪ ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಲಲಿತಾಂಬ ರಾಜೇಶ್ ಮತ್ತು ಸಾಬುದರ್ಗಾ ಚಾಲನೆ ನೀಡಿದರು.

ಆಟೋಟ ಕಾರ್ಯಕ್ರಮದಲ್ಲಿ ಹಿರಿಯರು ಮತ್ತು ಗುರುಗಾಂವ್ ಕನ್ನಡ ಸಂಘದ ಪೂರ್ವ ಅಧ್ಯಕ್ಷ ಡಿ.ವಿ.ಎಸ್ ಮೂರ್ತಿ, ವಸಂತ ರಾವ್, ಪ್ರಸನ್ನ ಹಾಗು ಅಮೇಥಿ ಯುನಿವರ್ಸಿಟಿ ಉಪಕುಲಪತಿ ಪ್ರಸನ್ನ, ನಾರ್ಥ್ ಕ್ಯಾಪ್ ಯುನಿವರ್ಸಿಟಿಯ ಕುಲಪತಿ ಶ್ರೀಧರ್ ಭಾಗವಹಿಸಿದ್ದರು.

ಮಕ್ಕಳಿಗಾಗಿ ಮೈಂಡ್ ಗೇಮ್, ರನ್ನಿಂಗ್ ರೇಸ್, ಕಬಡ್ಡಿ, ನೆನಪಿನ ಪರೀಕ್ಷೆ, ಮಹಿಳೆಯರಿಗೆ ಲೆಮನ್ ಸ್ಪೂನ್, ಹಗ್ಗ ಜಗ್ಗಾಟ, ದಂಪತಿಗಳ ಓಟ, 100 ಮೀಟರ್ ವೈಯಕ್ತಿಕ ಓಟ ಆಟಗಳು, ಹಿರಿಯರಿಗೆ ಬಾಲ್ ಇನ್ ದಿ ಬಕೆಟ್ ರನ್ನಿಂಗ್ ರೇಸ್ ಮತ್ತು ಪುರುಷರಿಗೆ ಕಬಡ್ಡಿ, ಹಗ್ಗ ಜಗ್ಗಾಟ, ರನ್ನಿಂಗ್ ರೇಸ್, ಕಪಲ್ ರೇಸ್ ಮತ್ತು ಮೂರು ಕಾಲು ಓಟ ಆಟಗಳು ನಡೆದವು. ಎಲ್ಲರು ತಮ್ಮ ತಮ್ಮ ಗೆಲುವಿಗಾಗಿ ಮನಃಪೂರ್ವಕವಾಗಿ ಪ್ರಯತ್ನ ಪಟ್ಟರು.



ಭಾನುವಾರದ ಕ್ರೀಡಾ ದಿನವನ್ನು ಸಂತೋಷ ಮತ್ತು ಆನಂದದಲ್ಲಿ ತೇಲಾಡುವಂತೆ ಮಾಡಿದರು. ಕಾರ್ಯಕ್ರಮದ ಪ್ರಾಯೋಜಕರಾಗಿ ಪೋಲಾರೈಸ್ ಆಸ್ಪತ್ರೆ ಸಹಕರಿಸಿತು.

ಇವರು ಕ್ರೀಡಾಂಗಣದಲ್ಲಿ ಸೇರಿದ ಸುಮಾರು 150 ಜನರಿಗೆ ಬಿ.ಪಿ, ಶುಗರ್ ತನಿಖೆ ಮಾಡಿ ಈ ರೋಗಗಳನ್ನು ತಡೆಯುವ ಬಗ್ಗೆ ಮುನ್ನೆಚ್ಚರಿಕೆ ನೀಡಿದರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾಕ್ಟರ್ ಸಿಂಗಾರಿ (ಒಡೆಯರು ಪೋಲಾರೈಸ್ ಆಸ್ಪತ್ರೆ ) ಅವರು ಆಟಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗೆದ್ದ ವಿಜೇತರಿಗೆ ಬಹುಮಾನ ನೀಡಿದರು.

ಒಟ್ಟಿನಲ್ಲಿ 350 ಜನ ಸೇರಿದ ಕ್ರೀಡಾ ದಿನವನ್ನು ಮಂಜುನಾಥ ಗೌಡ, ಈಶ್ವರ, ಶ್ರೀಮತಿ ಸುಮತಿ ಸಾಯಿ ಪ್ರಸಾದ್, ಶ್ರೀಮತಿ ಸುಜಾತ ನಿಂಬಾಳ್ ನಿರ್ವಹಿಸಿದರು.

*ಚಂದ್ರಶೇಖರ ಜೋಳದರಾಶಿ*

## ಚಿಣ್ಣರ ಲೋಕ

# ಫ್ಲೈಯಿಂಗ್ ಮಷಿನ್‌ಗಳು

ಮಕ್ಕಳೇ, ಆಕಾಶದಲ್ಲಿ ಹಾರುವ ಮಾನವ ನಿರ್ಮಿತ ಅವೆಷ್ಟೋ ವಾಹನಗಳನ್ನು ನಾವು ನಿಬ್ಬೆರಗಾಗಿ ನೋಡುತ್ತಿರುತ್ತೇವೆ. ಹಕ್ಕಿಯಂತೆ ಹಾರುವ ಆಸೆಯು ಮಹತ್ವಾಕಾಂಕ್ಷೆಯಾದಾಗ ಮಾನವ ಕಂಡು ಹಿಡಿದ ಕೌತುಕಗಳೇ ಈ ಯಂತ್ರ ಹಕ್ಕಿಗಳು.

ಇಂಗ್ಲಿಷ್‌ನಲ್ಲಿ ಏರ್‌ಕ್ರಾಫ್ಟ್ ಎಂದು ಕರೆಯಿಸಿಕೊಳ್ಳುವ ಈ ಯಂತ್ರ ಹಕ್ಕಿಗಳಲ್ಲಿ ಹಲವು ಪ್ರಕಾರಗಳಿವೆ. ಬಹುದೊಡ್ಡ ಗಾತ್ರದ ಏರ್‌ಲೈನರ್‌ಗಳು, ಚಿಕ್ಕ ಗಾತ್ರದ ಸ್ಪೋರ್ಟ್ಸ್ ಪ್ಲೇನ್‌ಗಳು, ಹೆಲಿಕಾಪ್ಟರ್‌ಗಳು, ಏರ್‌ಶಿಪ್‌ಗಳು, ಗ್ಲೈಡರ್‌ಗಳು ಮತ್ತು ಬಿಸಿಗಾಳಿಯಿಂದ ಚಲಿಸುವ ಬುಗ್ಗೆಗಳು(ಹಾಟ್ ಏರ್ ಬಲೂನ್) ಇವೆಲ್ಲಾ ವಿವಿಧ ಉದ್ದೇಶಗಳಿಗಾಗಿ ಬಳಕೆಯಾಗುತ್ತಿರುವ ಗಗನ ವಾಹನಗಳು.

ವಿಮಾನ ಚಾಲನೆಗೆ ಮುಖ್ಯವಾಗಿ ಮೂರು ನಿಯಂತ್ರಕಗಳಿವೆ. ಅವುಗಳೆಂದರೆ ರಡರ್, ಏಲರಾನ್ ಮತ್ತು ಎಲಿವೇಟರ್. ಇವುಗಳಿಗೆ ಕಂಟ್ರೋಲ್ ಸರ್ಫೇಸಸ್ ಎನ್ನುತ್ತಾರೆ.

ವಿಂಗ್(ರೆಕ್ಕೆ)ಗಳು ವಿಮಾನವನ್ನು ಗಾಳಿಯಲ್ಲಿ ಹಾರಾಡಲು ಸಹಾಯ ಮಾಡುತ್ತವೆ. ರೆಕ್ಕೆಯ ವಿಶೇಷ ಆಕಾರಕ್ಕೆ ಏರೋಫಾಯ್ಲ್ ಎನ್ನುತ್ತಾರೆ. ಇದು ಗಾಳಿಯನ್ನು ರೆಕ್ಕೆಯ ತಳಭಾಗಕ್ಕಿಂತ ಮೇಲ್ಭಾಗದಲ್ಲಿ ಹೆಚ್ಚು ವೇಗವಾಗಿ ಚಲಿಸುವಂತೆ ಮಾಡುತ್ತದೆ. ಇದರಿಂದಾಗಿ ಗಾಳಿ ಮೇಲ್ಮುಖವಾಗಿ ತಳ್ಳಲ್ಪಡುತ್ತದೆ. ಇದಕ್ಕೆ ಲಿಫ್ಟ್ ಎನ್ನುತ್ತಾರೆ. ವಿಂಗ್ ಸರಿಯಾಗಿ ಕೆಲಸ ಮಾಡಲು ವಿಮಾನವು ಅತ್ಯಂತ ವೇಗವಾಗಿ ಚಲಿಸುವ ಅಗತ್ಯವಿದೆ.




ವಿಮಾನವನ್ನು ಪೈಲಟ್ ಕಾಕ್‌ಪಿಟ್‌ನಿಂದ ನಡೆಸುತ್ತಾರೆ. ಕಂಟ್ರೋಲ್ ಕಲಂನ್ನು ನಡೆಸುವುದರಿಂದ ಏಲರಾನ್ ಮತ್ತು ಎಲಿವೇಟರ್‌ಗಳು ಚಲಿಸುತ್ತವೆ. ಫೂಟ್ ಪೆಡಲ್‌ಗಳನ್ನು ಒತ್ತುವುದರಿಂದ ರಡರ್ ಅಕ್ಕ ಪಕ್ಕಕ್ಕೆ ಚಲಿಸುತ್ತದೆ. ಕೈಯಿಂದ ನಡೆಸಲ್ಪಡುವ ಥ್ರಾಟಲ್‌ನಿಂದ ಇಂಜಿನ್‌ನ ಶಕ್ತಿಯನ್ನು ನಿಯಂತ್ರಿಸಬಹುದು.

ಇತ್ತೀಚಿಗೆ ವಿಮಾನಗಳನ್ನು ಕಂಪ್ಯೂಟರ್‌ನಿಂದಲೇ ನಿಯಂತ್ರಿಸುತ್ತಾರೆ.

ಹಕ್ಕಿಗಳು ಹಾರುವುದನ್ನು ನೋಡಿದ ಮಾನವ ತಾನೂ ಹಾರುವುದಕ್ಕೆ ಪ್ರಯತ್ನಿಸಿದ. ಅದರ ಫಲ ಸ್ವರೂಪವೇ ವೈಮಾನಿಕ ಯಂತ್ರಗಳ ಆವಿಷ್ಕಾರ. ಅದೇ ರೀತಿ ಈ ಚಿಕ್ಕ ಮಾಹಿತಿಯನ್ನು ಓದಿದ ನಮ್ಮ ಕನ್ನಡ ಕುವರನೊಬ್ಬನಲ್ಲಿ ವಿಮಾನವನ್ನು ನಡೆಸುವ ಪ್ರೇರಣೆ ಹುಟ್ಟಲೂ ಬಹುದು ಅಲ್ಲವೇ?

ಮಕ್ಕಳೇ, ಪರೀಕ್ಷೆಗಳು ನಡೆಯುತ್ತಿರುವ ಈ ಸಮಯದಲ್ಲಿ ನಿಮಗೆಲ್ಲಾ ಅಭಿಮತದ ಶುಭ ಹಾರೈಕೆಗಳು. ನಿಮ್ಮ ಗುರಿ ದೊಡ್ಡದಿರಲಿ, ಎತ್ತರಕ್ಕಿರಲಿ. ಗುರಿ ಮುಟ್ಟುವ ಹಂಬಲ ಈಡೇರಿಕೆಗೆ ದೆಹಲಿ ಅತ್ಯಂತ ಸೂಕ್ತವಾದ ಸ್ಥಳವಲ್ಲವೇ? ಛಲದಿಂದ ಮುನ್ನುಗ್ಗಿ...

ಇಂತೀ ನಿಮ್ಮ

*ಸಂತೋಷ್ ಮಾಮಾ*

## ಶ್ರದ್ಧಾಂಜಲಿ

### ಇಸ್ಮಾಯಿಲ್ ಬುಡಂದಿ ನಿಧನ



ದೆಹಲಿ ಕರ್ನಾಟಕ ಸಂಘದಲ್ಲಿ 2008-10ರ ಅವಧಿಗೆ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಇಸ್ಮಾಯಿಲ್ ಬುಡಂದಿ ಅವರು ದಿನಾಂಕ 28.02.20 ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅವರು ಕಳೆದ ಕೆಲವು ವರ್ಷಗಳಿಂದ ತಮ್ಮ ಊರು ಹಾವೇರಿಯಲ್ಲಿ ವಾಸಿಸುತ್ತಿದ್ದರು. ಅವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅಗಲಿದ ಇಸ್ಮಾಯಿಲ್ ಬುಡಂದಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಶ್ರದ್ಧಾಂಜಲಿ.

### Statement of Ownership and other Particulars about Delhi Karnataka Sangha's ABHIMATA


### FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press,<br>C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha<br>Rao Tularam Marg, Sector-12,<br>R.K. Puram, New Delhi - 110022 |
| **Editor's Name** | : | Dr. Avanindranath Rao Y |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha<br>Rao Tularam Marg, Sector-12<br>R.K. Puram, New Delhi- 110022 |

I, **C.M. Nagaraja,** hereby declare that the particulars given above are true to the best of my knowledge and belief.

**09.03.2020**
**New Delhi**

**Sd\-**
**Publisher**



ದೆಹಲಿ ಕರ್ನಾಟಕ ಸಂಘ ಮತ್ತು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ದಿನಾಂಕ 29.02.20ರಂದು ನಡೆದ ಶಿಕ್ಷಣ ಮತ್ತು ಉದ್ಯೋಗ : ರಾಷ್ಟ್ರೀಯ ನೀತಿ ವಿಚಾರ ಸಂಕಿರಣದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕುರಿತ ನೃತ್ಯ ರೂಪಕ ಪ್ರದರ್ಶಿಸಲಾಯಿತು. ಈ ನೃತ್ಯ ರೂಪಕವನ್ನು ಪ್ರದರ್ಶಿಸಿದ ಶ್ರೀ ಕೀರ್ತಿ ನಾಟಕ ಅಕಾಡೆಮಿ ಬೆಂಗಳೂರು ಮತ್ತು ಶ್ರೀ ಜಯನೃತ್ಯ ಕಲಾ ಅಕಾಡೆಮಿ, ಕೋಲಾರ ಇಲ್ಲಿನ ಕಲಾವಿದರನ್ನು ಗೌರವಿಸಲಾಯಿತು.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-

Delhi Karnataka Sangha Abhimata
March-2020, Vol. No.30, Issue No.6, Price Rs.1/-
RNI Regn. No. 53405/91, DL-SW-1/4016/19-21
Date of Publication : March 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

